# ಅಖಿಲ ಭಾರತ ಪತ್ರಿಕೆ

ಏಪ್ರಿಲ್ 2017



# ಏಕೈಕರಾದ ಅವರಿಬ್ಬರು

ಬೆಲೆ : 15/–



*There is no greater victory than*
*that of controlling oneself.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಏಕೈಕರಾದ ಅವರಿಬ್ಬರು"

ಭೌತದ್ರವ್ಯ ದಿವ್ಯಾತ್ಮನ ಮುಖವನ್ನು ತೆರೆದು ತೋರಿಸುವುದು.

**– ಶ್ರೀ ಅರವಿಂದರು**

ನಾನು ಪಾಂಡಿಚೇರಿಗೆ (ಸುಮಾರು ಎಪ್ರಿಲ್ 24, 1920ರಲ್ಲಿ) ಮರಳಿ ಬಂದ ದಿನದ ವಾರ್ಷಿಕ ದಿನ ವಿರೋಧೀ ಶಕ್ತಿಗಳ ಮೇಲೆ ನಿಶ್ಚಿತ ಜಯ ಪಡೆಯುವುದರ ವಾಸ್ತವ ಕುರುಹಾಗಿತ್ತು.


**ಅನು : ಡಾ. ಕೆ.ಎಸ್. ಆಮೂರ**

ಏಕೈಕರಾದ ಅವರಿಬ್ಬರು (ಕವಿತೆ) 3

ವಿಭಜಿಸಲಾಗದ ಏಕತೆ 5

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಶ್ರೀ ಅರವಿಂದರ ದೈವೀ ಶಕ್ತಿ 24

**ಅನು : ಡಾ. ಕೆ.ಎಸ್. ಆಮೂರ**

ಶ್ರೀಮಾತೆಯವರಲ್ಲಿ ಆಶ್ರಯ ಪಡೆಯಿರಿ 37

ವಾರ್ತಾಪತ್ರ 51

## (All India Magazine) ಸಂಪಾದಕೀಯ:

ಅವತಾರ ಪುರುಷ ಜನ್ಮವೆತ್ತಿ ಬಂದ ಪ್ರತಿಸಲ, ಒಂದಿಲ್ಲೊಂದು ರೀತಿಯಲ್ಲಿ ಅವನ ದೈವೀಶಕ್ತಿಯ ಸಾನ್ನಿಧ್ಯವೂ ಇರುತ್ತಿತ್ತು, ಆದರೆ ಸಾಮಾನ್ಯವಾಗಿ ಆ ಶಕ್ತಿ ಹಿನ್ನೆಲೆಯಲ್ಲಿ ಉಳಿದುಕೊಂಡಿರುತ್ತಿತ್ತು. ಮೊದಲ ಸಲ ಅವರಿಬ್ಬರೂ ಒಮ್ಮೆಗೆ ಬಂದುದನ್ನು, ಅಷ್ಟೇ ಅಲ್ಲದೆ ದೈವೀಶಕ್ತಿಯು ಮನುಕುಲದ ಮಧ್ಯೆ ದೈವೀ ಲೀಲೆಗೆ ಮುಂಚೂಣಿಯಲ್ಲಿ ಇರುವುದನ್ನು ನೋಡುತ್ತೇವೆ. ಬಹುಶಃ ಇದಕ್ಕೆ ಕಾರಣ ಈ ಸಲ ಧರ್ಮದ ಸಮತೋಲನದ ಪುನರುಜ್ಜೀವನದ ಪ್ರಶ್ನೆಯಷ್ಟೇ ಅಲ್ಲ, ಉತ್ಕ್ರಾಂತಿಯ ಏಣಿಗೆ ಇನ್ನೊಂದು ಹೆಜ್ಜೆ ಸ್ಥಳವನ್ನು ಅಧಿಕವಾಗಿಸುವುದಷ್ಟೇ ಅಲ್ಲ, ಆದರೆ ಅದಕ್ಕೂ ಅಧಿಕವಾಗಿ ಹೊಸ ಸೃಷ್ಟಿಯ– ಅದನ್ನು ಹೊಸ ಜಗತ್ತಿನ ಜನ್ಮವೆಂದು ಕರೆಯಬಹುದು– ಕಾರ್ಯದಲ್ಲಿ ತೊಡಗಿಕೊಳ್ಳುವುದಾಗಿದೆ. ಹೊಸ ಜಗತ್ತನ್ನು ಕುರಿತಾದ ಕಲ್ಪನೆಯನ್ನು ಪೃಥ್ವಿ–ಪ್ರಜ್ಞೆಯಲ್ಲಿ ಬಹಳಷ್ಟು ಸಲ ಬಿತ್ತಲಾಗಿದೆ– ಯಾದರೂ ಅದರ ವಾಸ್ತವ ರೂಪತಾಳುವಿಕೆ, ಅದರ ಜನ್ಮಕ್ಕಾಗಿರುವ ಹೆರಿಗೆ ನೋವುಗಳು ಇವುಗಳನ್ನು ದೈವೀಶಕ್ತಿ ಮಾತ್ರ ತಾಳಿಕೊಳ್ಳಬಹುದು, ಅವಳು ನಿಜವಾಗಿ ಎಲ್ಲ ಸೃಷ್ಟಿಯ ರಹಸ್ಯ ಗರ್ಭ ಹೊತ್ತಿದ್ದಾಳೆ. ಶ್ರೀ ಅರವಿಂದರು ನೇರ–ವಾಗಿ ಹಾಗೂ ಸ್ಪಷ್ಟವಾಗಿ ಹೇಳಿದ್ದೇನೆಂದರೆ ತಮ್ಮ ಹಾಗೂ ಶ್ರೀಮಾತೆಯವರ ಪ್ರಜ್ಞೆಗಳಲ್ಲಿ ಯಾವ ಭೇದವೂ ಇಲ್ಲ ಮತ್ತು ಅವರ ಸಮಗ್ರ ಯೋಗದಲ್ಲಿ ಮೂಲಭೂತ ಹೆಜ್ಜೆ ಶ್ರೀಮಾತೆಯವರಿಗೆ ತೆರೆದಿಟ್ಟುಕೊಳ್ಳುವುದಾಗಿದೆ ಹಾಗೂ ಅವರಲ್ಲಿ ಆಶ್ರಯ ಪಡೆಯುವುದಾಗಿದೆ. ಈ ಸಂಚಿಕೆ ಶ್ರೀ ಅರವಿಂದರ ಈ ಕೇಂದ್ರ ಸತ್ಯಗಳನ್ನು ಪರ್ಯಾಲೋಚಿಸುತ್ತದೆ.

*



**(ಸಮಾಧಿಯತ್ತ ನೋಡುತ್ತಿರುವಾಗ ಶ್ರೀಮಾತೆಯವರು ಹೇಳಿದ್ದು)**

ನಾನು ಪೂಜೆಗೊಳ್ಳಲು ಬಯಸುವುದಿಲ್ಲ. ನಾನು ಕಾರ್ಯ ಕೈಕೊಳ್ಳಲು ಬಂದಿದ್ದೇನೆ, ಪೂಜೆ ಮಾಡಿಸಿಕೊಳ್ಳುವುದಕ್ಕಲ್ಲ. ಅವರು ನಿಮ್ಮನ್ನು (ಶ್ರೀ ಅರವಿಂದರನ್ನು) ತಮ್ಮ ಹೃದಯ ತೃಪ್ತಿಗೊಳ್ಳುವವರೆಗೆ ಪೂಜೆ ಮಾಡಲಿ, ಕ್ಷೋಭೆಗೊಳಗಾಗದಂತೆ ನಾನು ನಿಶ್ಚಲನೀರವತೆಯಲ್ಲಿರಲು ಹಾಗೂ ಅಡಗಿರಲು ನನ್ನನ್ನು ಬಿಟ್ಟುಕೊಡಲಿ, ಎಲ್ಲ ಪರದೆಗಳಲ್ಲಿ ದೇಹ ಅತ್ಯಂತ ಒಳ್ಳೆಯ ಪರದೆಯಾಗಿದೆ.

**CWM, 13/46** **– ಶ್ರೀಮಾತೆ**

*

## ಏಕೈಕರಾದ ಅವರಿಬ್ಬರು

ಏಕೈಕರಾಗಿರುವ ಇಬ್ಬರು ದೈವೀ ವ್ಯಕ್ತಿಗಳಿಹರು, ಹಲವಾರು ಲೋಕಗಳಲಿ
ಲೀಲೆ ನಡೆಸುತಿಹರು;
ಜ್ಞಾನದಲಿ, ಅವಿದ್ಯೆಯಲಿ ಅವರು ಮಾತನಾಡಿಹರು, ಭೇಟಿಮಾಡಿಹರು
ಮತ್ತು ಪ್ರಕಾಶ ಹಾಗೂ ಅಂಧಕಾರ ಅವರ ಕಣ್ಣುಗಳ ಪರಸ್ಪರ
ವಿನಿಮಯದಂತಿಹವು
ನಮ್ಮ ಹರ್ಷ ಹಾಗೂ ನೋವು ಅವರ ಮಲ್ಲಯುದ್ಧ ಹಾಗೂ
ಅಪ್ಪುಗೆಗಳಂತಿಹವು

ನಮ್ಮ ಕಾರ್ಯಗಳು ಹಾಗೂ ಭರವಸೆಗಳು ಅವರ ಕತೆಗೆ
ಸುಪರಿಚಿತವಾಗಿಹವು,
ಅವರು ನಮ್ಮ ಯೋಚನೆಯಲಿ ಹಾಗೂ ಜೀವನದಲಿ ರಹಸ್ಯವಾಗಿ
ಮದುವೆ ಮಾಡಿಕೊಂಡಿಹರು.
ವಿಶ್ವ ಕೊನೆರಹಿತ ವೇಷದ ನೃತ್ಯಗೋಷ್ಠಿಯಂತಿಹುದು:
ಕಾರಣ ಇಲ್ಲಿ ಯಾವುದೂ ಸಂಪೂರ್ಣವಾಗಿ ಅದು ತೋರಿಬರುವಂತೆ
ಇರುವುದಿಲ್ಲ,
ಅದು ಸತ್ಯವೊಂದನು ಕುರಿತು ಕನಸಿನಲಿ ಕಂಡ ವಾಸ್ತವತೆಯಂತಿಹುದು
ಕನಸಿರದಿದ್ದಲ್ಲಿ ಆ ಸತ್ಯ ಇಡಿಯಾಗಿ ಸತ್ಯವಾಗಿರದು
ಗೋಚರ ಸಂಗತಿಯೊಂದು ಮಹತ್ವದ್ದಾಗಿ ಎದ್ದು ಕಾಣುತಿಹುದು
ನಾವದರ ಮುಖವನ್ನು ಒಪ್ಪಿಕೊಳ್ಳುತ್ತೇವೆ ಅದರರ್ಥವೆಲ್ಲವನ್ನೂ
ಗಮನಿಸದಿಹೆವು
ಭಾಗವೊಂದನು ನೋಡಲಾಗುವುದು, ಅದು ಇಡಿಯದೆಂದು ನಾವು
ಭಾವಿಸುವೆವು.
ಲೇಖಕನೇ ತಾನಾಗಿ, ತನ್ನೊಡನೆ ನಟನಾಗಿರುವುದೇ ದೃಶ್ಯವಾಗಿ
ಅಲ್ಲಿ ಅವನು ದಿವ್ಯಾತ್ಮನಾಗಿ ಚಲಿಸುವನು, ಅವಳು ಪ್ರಕೃತಿಯಾಗಿ
ಚಲಿಸುವಳು.

ತಾರೆಗಳನು ಒಟ್ಟಿಗೆ ಕಟ್ಟಿ ಹಾಕುವ ಗಂಟು ಇದು;
ಏಕೈಕರಾದ ಅವರಿಬ್ಬರು ಎಲ್ಲ ಸಾಮರ್ಥ್ಯದ ರಹಸ್ಯವಾಗಿಹರು,
ಏಕೈಕರಾದ ಅವರಿಬ್ಬರು ವಸ್ತು–ವಿಷಯಗಳಲಿರುವ ಅಧಿಕ ಬಲ,
ನ್ಯಾಯಯುತ ಹಕ್ಕು ಆಗಿಹರು.
ನಿಶ್ಚಲ ನೀರವತೆಯಲಿರುವ ಅವನಾತ್ಮ ಜಗತ್ತಿಗೆ ಹಾಗೂ ಅವಳಿಗೆ ಆಧಾರ
ನೀಡುತಿಹುದು,
ಅವನ ಕ್ರಿಯೆಗಳು ಅವಳ ದೈವಾಜ್ಞೆಗಳ ದಾಖಲೆ ಪುಸ್ತಕಗಳಾಗಿಹವು.
ಸಂತುಷ್ಟನಾಗಿ, ಜಡನಾಗಿ ಅವಳ ಪಾದಗಳಡಿಯಲಿ ಒರಗಿಕೊಂಡಿಹನು:
ಅವಳ ವಿಶ್ವವ್ಯಾಪಿ ನರ್ತನಕ್ಕಾಗಿ ಅವನು ತನ್ನ ಎದೆಯನ್ನು ಅರ್ಪಿಸುತಿಹನು
ಆ ನರ್ತನಕ್ಕೆ ನಮ್ಮ ಜೀವನಗಳು ಕಂಪಿಸುತ್ತಿರುವ ರಂಗಮಂದಿರವಾಗಿಹವು

ಅವನೊಳಗಿರುವ ಶಕ್ತಿಯಿಂದಲ್ಲದೆ ಅದನ್ನು ಬೇರೆ ಯಾರೂ
ತಾಳಿಕೊಳ್ಳಲಾರರು,
ಆದಾಗ್ಯೂ ಅವನ ದಿವ್ಯಾನಂದದ ಕಾರಣದಿಂದಾಗಿ ಯಾರೂ ಅದನ್ನು
ತ್ಯಜಿಸಿ ಹೋಗಲಾರರು. . . .

**Savitri, pp.61, 63** **– ಶ್ರೀ ಅರವಿಂದರು**

*

## ವಿಭಜಿಸಲಾಗದ ಏಕತೆ

### ಏಕೈಕ ಪ್ರಜ್ಞೆ

ಶ್ರೀಮಾತೆಯವರ ಪ್ರಜ್ಞೆ ಮತ್ತು ನನ್ನ ಪ್ರಜ್ಞೆ ಇವುಗಳ ಏಕತೆ ಕುರಿತು ವೈರುಧ್ಯ ಹಳೆಯ ಕಾಲದ ಅನ್ವೇಷಣೆಯಾಗಿತ್ತು (X, Y ಮತ್ತು ಆಗಿನ ಕಾಲದಲ್ಲಿ ಇಲ್ಲಿದ್ದ ಇತರರಿಂದಾಗಿತ್ತು) ಮತ್ತು ಶ್ರೀಮಾತೆಯವರನ್ನು ಪೂರ್ತಿಯಾಗಿ ಗುರುತಿಸದ ಹಾಗೂ ಒಪ್ಪಿಕೊಳ್ಳದ, ಇಲ್ಲಿ ಪ್ರಾರಂಭಕಾಲದಲ್ಲಿದ್ದ ಜನರಿಂದ ಅದು ಹೊರಹೊಮ್ಮಿತ್ತು. ಶ್ರೀಮಾತೆಯವರನ್ನು ಗುರುತಿಸಿದ ನಂತರವೂ ಅವರು ಈ ಅರ್ಥರಹಿತ ವೈರುಧ್ಯದಲ್ಲಿ ಪಟ್ಟುಹಿಡಿದು ಉಳಿದುಕೊಂಡರು ಮತ್ತು ತಮಗೆ ಹಾಗೂ ಇತರರಿಗೆ ದೊಡ್ಡ ಹಾನಿಯನ್ನುಂಟು ಮಾಡಿದರು. ಶ್ರೀಮಾತೆಯವರ ಪ್ರಜ್ಞೆ ಹಾಗೂ ನನ್ನ ಪ್ರಜ್ಞೆ ಒಂದೇ ಆಗಿವೆ. ಏಕೈಕ ದೈವೀಪ್ರಜ್ಞೆ ಇಬ್ಬರಲ್ಲಿದೆ, ಏಕೆಂದರೆ ಅದು ಲೀಲೆಗಾಗಿ ಅವಶ್ಯವಾಗಿತ್ತು. ಶ್ರೀಮಾತೆಯವರ ಅರಿವಿಗೆ ಬರದಂತೆ, ಅವರ ಶಕ್ತಿಯಿಲ್ಲದೆ, ಪ್ರಜ್ಞೆಗೆ ತಿಳಿದು ಬರದ ಹಾಗೆ ಏನನ್ನೂ ಕೈಕೊಳ್ಳಲಾಗುವುದಿಲ್ಲ.– ಯಾರಾದರೂ ಅವರ ಪ್ರಜ್ಞೆಯ ಬಗ್ಗೆ ಅರಿವು ತಂದುಕೊಂಡರೆ ಅದರ ಹಿಂದೆ ನನ್ನದೂ ಇರುತ್ತದೆಂದು ತಿಳಿದುಕೊಳ್ಳಬೇಕು. ಅವನು ನನ್ನ ಪ್ರಜ್ಞೆಯ ಬಗ್ಗೆ ಅರಿವು ತಂದುಕೊಂಡರೆ, ಶ್ರೀಮಾತೆಯವರ ಪ್ರಜ್ಞೆಯ ಬಗೆಗೂ ಅರಿವು ತಂದುಕೊಂಡಿ–ರುತ್ತಾನೆ. ಅಂತಹ ಪ್ರತ್ಯೇಕತೆಯೊಂದನ್ನು ಉಂಟು ಮಾಡಿದರೆ (ಈ ವಿಷಯಗಳ ಮೇಲೆ ಅವರು ತಮ್ಮ ಹೊರಳುವಿಕೆಗಳನ್ನು ಇರಿಸುವುದನ್ನು ನಾನು ಬಿಟ್ಟುಕೊಡುತ್ತೇನೆ) ದೈವೀ ಸತ್ಯ ಸ್ಥಾಪಿತಗೊಳ್ಳುವುದು ಹೇಗೆ?– ದೈವೀ ಸತ್ಯದಲ್ಲಿ ಇಂತಹ ಪ್ರತ್ಯೇಕತೆ ಇರುವುದಿಲ್ಲ.

*

**ಏಕೈಕ ದೈವೀ ಶಕ್ತಿ**

**ಪ್ರಶ್ನೆ :** *ನಿಮ್ಮ ಕಾರ್ಯಗತಿಯಲ್ಲಿ ಹಾಗೂ ಶ್ರೀಮಾತೆಯವರ ಕಾರ್ಯಗತಿಯಲ್ಲಿ ಏನಾದರೂ ಭೇದವಿದೆಯೆ?– ಶಕ್ತಿಯಲ್ಲಿ ಇಲ್ಲವೆ ಪರಿಣಾಮಕಾರಿತ್ವದಲ್ಲಿ ಎಂಬರ್ಥದಲ್ಲಿ ಈ ಪ್ರಶ್ನೆ ಕೇಳುತ್ತಿದ್ದೇನೆ.*

**ಶ್ರೀ ಅ :** ಅದು ಏಕೈಕ ದೈವೀ ಸಾಮರ್ಥ್ಯ.

*

ನಾವಿಬ್ಬರೂ ಏಕವಾಗಿದ್ದೇವೆ ಮತ್ತು ಕೊಡಲಾದುದೆಲ್ಲವನ್ನೂ ಇಬ್ಬರಿಂದಲೂ ಕೊಡಲಾಗುತ್ತದೆ ಎಂದು ಹೇಳುವುದು ಸಹಜವಾಗಿ ಸರಿಯಾಗಿದೆ. ನಾನು ಕೊಟ್ಟಾಗ ಶ್ರೀಮಾತೆಯವರ ದೈವೀಶಕ್ತಿ ಅದರೊಂದಿಗೆ ಸಾಗುತ್ತದೆ, ಹಾಗಿಲ್ಲದಿದ್ದರೆ ಸಾಧಕ ಏನನ್ನೂ ದೊರಕಿಸುವುದಿಲ್ಲ ಮತ್ತು ಶ್ರೀಮಾತೆಯವರು ಕೊಟ್ಟಾಗ ನನ್ನ ಸಮರ್ಥನೆ ಅದರೊಂದಿಗಿರುತ್ತದೆ ಮತ್ತು ಅದಕ್ಕೆ ನನ್ನ ಹಾಗೂ ಶ್ರೀಮಾತೆಯವರ ಪ್ರಕಾಶ ನೀಡುತ್ತದೆ.

ಅದು ಒಂದು ಅವಿಭಜಿತ ಕ್ರಿಯೆಯ ಎರಡು ಮಗ್ಗಲು, ಒಂದು ಇನ್ನೊಂದನ್ನು ಕೊಂಡೊಯ್ಯುತ್ತದೆ. ಶ್ರೀಮಾತೆಯವರ ದೈವೀ ಶಕ್ತಿ ಮುನ್ನೂಡಿಕೆ–ಯನ್ನು ಹಾಗೂ ಶಾಂತಿಯನ್ನು ಕೊಡುತ್ತದೆ.

ಶ್ರೀಮಾತೆಯವರಿಂದ ಮನುಷ್ಯ ಏನನ್ನೇ ದೊರಕಿಸಲಿ ಅದು ನನ್ನಿಂದಲೂ ಬರುತ್ತದೆ– ಅದರಲ್ಲಿ ವ್ಯತ್ಯಾಸವಿಲ್ಲ. ಹಾಗೆಯೇ ನಾನೇನನ್ನಾದರೂ ಕೊಟ್ಟರೆ ಅದು ಶ್ರೀಮಾತೆಯವರ ದೈವೀಶಕ್ತಿಯೊಂದಿಗೆ ಸಾಧಕನತ್ತ ಹೋಗುತ್ತದೆ.

**CWSA, 32/79** **– ಶ್ರೀ ಅರವಿಂದರು**

*

**ಏಕೈಕ ಪಥ**

ಶ್ರೀಮಾತೆಯವರ ಪ್ರಜ್ಞೆ ದೈವೀಪ್ರಜ್ಞೆಯಾಗಿದೆ ಮತ್ತು ಅದರಿಂದ ಬರುವ ದೈವೀಪ್ರಕಾಶ ದೈವೀ ಸತ್ಯದ ಪ್ರಕಾಶವಾಗಿರುತ್ತದೆ; ಅವರು ಕೆಳಗಿಳಿಸಿ ತರುವ ದೈವೀ ಶಕ್ತಿ ದೈವೀ ಪ್ರಕಾಶದ ಶಕ್ತಿಯಾಗಿರುತ್ತದೆ. ಶ್ರೀಮಾತೆಯವರ ದೈವೀ ಪ್ರಕಾಶವನ್ನು ಸ್ವೀಕರಿಸುವವನು, ಒಪ್ಪಿಕೊಳ್ಳುವವನು ಮತ್ತು ಅದರಲ್ಲಿ ಜೀವಿಸುವವನು ಮಾನಸಿಕ,

ಪ್ರಾಣಿಕ ಹಾಗೂ ಭೌತಿಕವಾದ ಎಲ್ಲ ಸ್ತರಗಳಲ್ಲಿ ಸತ್ಯವನ್ನು ನೋಡಲು ಪ್ರಾರಂಭಿಸುತ್ತಾನೆ, ಮಿಥ್ಯೆ, ಅಜ್ಞಾನ, ಅಂಧಕಾರದ ಶಕ್ತಿಗಳ ದೋಷ ಇವೆಲ್ಲವೂ ಅದೈವಿಕವಾದವುಗಳು, ಹಾಗೆಯೇ ದೈವೀ ಸತ್ಯವನ್ನು, ಅದರ ಪ್ರಕಾಶವನ್ನು ಹಾಗೂ ಶಕ್ತಿಯನ್ನು ಒಪ್ಪಿಕೊಳ್ಳದೆ ಇರುವುದು ಅದೈವಿಕವಾದದ್ದು. ಹಾಗಾಗಿ ಶ್ರೀಮಾತೆಯವರ ಪ್ರಕಾಶ ಹಾಗೂ ಶಕ್ತಿಗಳನ್ನು ಒಪ್ಪಿಕೊಳ್ಳಲು ಇಷ್ಟಪಡದೆ ಇರುವುದು ಅದೈವಿಕವಾದದ್ದು. ಆ ಕಾರಣದಿಂದಾಗಿಯೇ ನಾನು ಯಾವಾಗಲೂ ಹೇಳುತ್ತಿದ್ದುದು ಏನೆಂದರೆ ಶ್ರೀಮಾತೆಯವರ ದೈವೀ ಸಾಮರ್ಥ್ಯ ಹಾಗೂ ದೈವೀಪ್ರಕಾಶ ಇವುಗಳ ಸಂಪರ್ಕದಲ್ಲಿರಬೇಕು, ಹಾಗೆ ಮಾಡುವುದರಿಂದ ಮಾತ್ರ ನೀವು ಗೊಂದಲ ಹಾಗೂ ಮಬ್ಬುತನದಿಂದ ಹೊರಬರಬಲ್ಲಿರಿ ಮತ್ತು ಮೇಲಿನಿಂದ ಬರುವ ದೈವೀ ಸತ್ಯವನ್ನು ಸ್ವೀಕರಿಸಬಲ್ಲಿರಿ.

ಶ್ರೀಮಾತೆಯವರ ಪ್ರಕಾಶ ಇಲ್ಲವೆ ನನ್ನ ಪ್ರಕಾಶ ಕುರಿತು ನಾವು ವಿಶೇಷ ರೀತಿಯಲ್ಲಿ ಹೇಳಿದಾಗ ವಿಶಿಷ್ಟ ರಹಸ್ಯ ಕ್ರಿಯೆಯ ಬಗ್ಗೆ ಹೇಳುತ್ತಿರುತ್ತೇವೆ– ಅತಿ ಮನಸ್ಸಿನಿಂದ ಬರುವ ಕೆಲವೊಂದು ಪ್ರಕಾಶಗಳನ್ನು ಕುರಿತು ಹೇಳುತ್ತಿರುತ್ತೇವೆ.

ಈ ಕ್ರಿಯೆಯಲ್ಲಿ ಶ್ರೀಮಾತೆಯವರದು ಶುಭ್ರ ದೈವೀಪ್ರಕಾಶ, ಅದು ಪರಿಶುದ್ಧಗೊಳಿಸುತ್ತದೆ, ಜ್ಞಾನೋದಯವನ್ನು ಉಂಟುಮಾಡುತ್ತದೆ, ದೈವೀ ಸತ್ಯದ ಇಡೀ ಸಾರವನ್ನು, ಸಾಮರ್ಥ್ಯವನ್ನು ಕೆಳಗಿಳಿಸಿ ತರುತ್ತದೆ ಮತ್ತು ಪರಿವರ್ತನೆ ಸಾಧ್ಯವಾಗುವಂತೆ ಮಾಡುತ್ತದೆ. ಆದರೆ ವಾಸ್ತವದಲ್ಲಿ ಮೇಲಿನಿಂದ ಬರುವ ಎಲ್ಲ ಶುಭ್ರಪ್ರಕಾಶ ಅತ್ಯುಚ್ಚ ದೈವೀಸತ್ಯದಿಂದ ಬರುವ ಶ್ರೀಮಾತೆಯವರ ಪ್ರಕಾಶ–ವಾಗಿರುತ್ತದೆ. ಶ್ರೀಮಾತೆಯವರ ಪಥ ಹಾಗೂ ನನ್ನ ಪಥ ಇವುಗಳಲ್ಲಿ ಯಾವ ಭೇದವೂ ಇಲ್ಲ, ನಮ್ಮಲ್ಲಿ ಒಂದೇ ಒಂದು ಪಥವಿದೆ ಮತ್ತು ಯಾವಾಗಲೂ ಒಂದೇ ಪಥವಿತ್ತು, ಈ ಪಥ ಅತಿಮಾನಸದ ಬದಲಾವಣೆಯತ್ತ, ದೈವೀ ಸಾಕ್ಷಾತ್ಕಾರದತ್ತ ಕರೆದೊಯ್ಯುತ್ತದೆ, ಕೊನೆಯಲ್ಲಿ ಮಾತ್ರವಷ್ಟೇ ಅಲ್ಲ, ಆದರೆ ಪ್ರಾರಂಭದಿಂದಲೂ ಅವು ಒಂದೇ ಆಗಿದ್ದವು.

ಈ ಬಗೆಯ ವಿಭಜನೆ ಹಾಗೂ ವೈರುದ್ಧ್ಯವನ್ನು ಇರಿಸುವ ಪ್ರಯತ್ನ, ಶ್ರೀಮಾತೆಯವರನ್ನು ಒಂದು ಬದಿಗೆ ಮತ್ತು ನನ್ನನ್ನು ಇನ್ನೊಂದು ವಿರುದ್ಧ ಇಲ್ಲವೆ ಬಹಳ ಭಿನ್ನ ಬದಿಯಲ್ಲಿ ಇರಿಸುವುದು, ಯಾವಾಗಲೂ, ಮಿಥ್ಯೆಯ ಶಕ್ತಿಗಳ ಒಂದು ಕುತಂತ್ರವಾಗಿದೆ. ಸಾಧಕ ದೈವೀ ಸತ್ಯವನ್ನು ತಲುಪುವುದನ್ನು ತಡೆಯಲು ಈ ಶಕ್ತಿಗಳು ಬಯಸುತ್ತವೆ. ಇಂತಹ ಎಲ್ಲ ಮಿಥ್ಯೆಗಳನ್ನು ನಿನ್ನಿಂದ ಹೊರಗೋಡಿಸು.

ಶ್ರೀಮಾತೆಯವರ ಪ್ರಕಾಶ ಹಾಗೂ ಶಕ್ತಿ ಇವು ದೈವೀಸತ್ಯದ ಪ್ರಕಾಶ ಹಾಗೂ ಶಕ್ತಿ ಎಂಬುದನ್ನು ತಿಳಿದುಕೋ. ಯಾವಾಗಲೂ ಶ್ರೀಮಾತೆಯವರ ಪ್ರಕಾಶ ಹಾಗೂ ಶಕ್ತಿಗಳ ಸಂಪರ್ಕದಲ್ಲಿರು, ಆಗ ಮಾತ್ರ ನೀನು ದೈವೀ ಸತ್ಯದಲ್ಲಿ ಬೆಳೆಯುವಿ.

**CWSA, 35/455–56** **– ಶ್ರೀ ಅರವಿಂದರು**

*

ಶ್ರೀಮಾತೆಯವರು ಹಾಗೂ ನನ್ನ ನಡುವೆ ಪ್ರತ್ಯೇಕತೆ ಇರುವುದನ್ನು ಕುರಿತು, ನಮ್ಮ ಪಥಗಳು ಭಿನ್ನವಾಗಿರುವುದನ್ನು ಕುರಿತು, ನಮ್ಮ ಗುರಿಗಳು ಭಿನ್ನವಾಗಿರು–ವುದನ್ನು ಕುರಿತು ಇರುವ ವಿಚಾರಗಳು ತಪ್ಪಾದವು ಎಂಬುದರ ಬಗ್ಗೆ ಇದಕ್ಕಿಂತ ಮೊದಲೊಮ್ಮೆ ನಾನು ಬರೆದಿದ್ದೆ. ನಮ್ಮ ಪಥ ಒಂದೇ, ನಮ್ಮ ಗುರಿ ಕೂಡ ಒಂದೇ– ಅದು ಅತಿಮಾನಸ ಭಗವಂತ.

*

ಶ್ರೀ ಅರವಿಂದರನ್ನು ಭೇಟಿ ಮಾಡುವುದಕ್ಕಿಂತ ಹಾಗೂ ಅವರ ಪರಿಚಯ–ವಾಗುವುದಕ್ಕಿಂತ ಮೊದಲೇ ಶ್ರೀಮಾತೆಯವರು ಯೋಗದ ಆಚರಣೆಯನ್ನು ಕೈಕೊಂಡಿದ್ದರು. ಆದರೆ ಅವರ ಸಾಧನೆಗಳ ಮಾರ್ಗಗಳು ಸ್ವತಂತ್ರವಾಗಿ ಅದೇ ಮುನ್ನಡೆಯನ್ನು ಅನುಸರಿಸಿದವು. ಅವರು ಭೇಟಿ ಮಾಡಿದ ನಂತರ ಸಾಧನೆಯನ್ನು ಪರಿಪೂರ್ಣಗೊಳಿಸುವುದಕ್ಕಾಗಿ ಪರಸ್ಪರರಿಗೆ ಸಹಾಯ ಮಾಡಿದರು. ಶ್ರೀ ಅರವಿಂದರ ಯೋಗ ಎಂದು ಕರೆಯಲಾದದ್ದು ಶ್ರೀಮಾತೆಯವರು ಹಾಗೂ ಶ್ರೀ ಅರವಿಂದರು ಒಟ್ಟಿಗೆ ಕೈಕೊಂಡ ಸೃಷ್ಟಿಯಾಗಿದೆ. ಅವರು ಈಗ ಪರಸ್ಪರರಲ್ಲಿ ಅನ್ಯೋನ್ಯತೆಯನ್ನು ಕಂಡುಕೊಂಡಿದ್ದಾರೆ.– ಆಶ್ರಮದಲ್ಲಿ ಸಾಧನೆ ಮತ್ತು ಉಳಿದೆಲ್ಲ ವ್ಯವಸ್ಥೆ ಇವುಗಳನ್ನು ಶ್ರೀಮಾತೆಯವರು ಕೈಕೊಳ್ಳುತ್ತಾರೆ, ಶ್ರೀ ಅರವಿಂದರು ಹಿಂದೆ ಇದ್ದುಕೊಂಡು ಆಧಾರ ನೀಡುತ್ತಾರೆ. ಸಾಧನೆ ಕೈಕೊಳ್ಳುವುದಕ್ಕೆ ಇಲ್ಲಿಗೆ ಬರುವವರು ತಮ್ಮನ್ನು ಶ್ರೀಮಾತೆಯವರಿಗೆ ಅರ್ಪಿಸಿಕೊಳ್ಳಬೇಕು, ಶ್ರೀಮಾತೆಯವರು ಅವರಿಗೆ ಯಾವಾಗಲೂ ಸಹಾಯ ಮಾಡುತ್ತಾರೆ ಮತ್ತು ಅವರ ಆಧ್ಯಾತ್ಮಿಕ ಜೀವನವನ್ನು ನಿರ್ಮಾಣ ಮಾಡುತ್ತಾರೆ.

**CWSA, 32/81** **– ಶ್ರೀ ಅರವಿಂದರು**

*

## ಬಹಳ ಕಡಿಮೆಯಾದುದೂ ಅಲ್ಲ, ಬಹಳ ದೊಡ್ಡದಾದುದೂ ಅಲ್ಲ

**ಪ್ರಶ್ನೆ :** *ಎಲ್ಲೆಡೆಯಲ್ಲಿ ಭಗವಂತನನ್ನು ಆತ್ಮದ ರೂಪದಲ್ಲಿ ಭಾವನೆಗೆ ತಂದು–ಕೊಳ್ಳುತ್ತೇನೆ, ಅವನು ನನ್ನನ್ನು ತನ್ನೆಡೆಗೆ ಎಳೆಯುತ್ತಿರುತ್ತಾನೆ. ಅವನು ಎಲ್ಲದರ ದಿವ್ಯಾತ್ಮ ಹಾಗೂ ಪ್ರಭುವಾಗಿದ್ದಾನೆ. ಅವನು ಶ್ರೀಮಾತೆಯವರಿಗಿಂತ ಶ್ರೇಷ್ಠ–ನಾಗಿದ್ದಾನೆ ಎಂಬ ಭಾವನೆ ನನಗೆ ಬರುತ್ತದೆ. ಅವನು ನನ್ನ ತಂದೆ ಸ್ವರೂಪ–ದವರಾದ ಶ್ರೀ ಅರವಿಂದರಲ್ಲಿ ಮೈವೆತ್ತ ಭಗವಂತ ಎಂಬ ಭಾವನೆ ಬರುತ್ತದೆ.*

**ಶ್ರೀ ಅ :** ಅದು ಭಗವಂತನ ಒಂದು ಮುಖ.– ಆದರೆ ದಿವ್ಯಾತ್ಮನೆಂದು ಭಗವಂತ ಮತ್ತು ದೈವೀ ಪ್ರಭು ಹಾಗೂ ಭಗವಂತನೆಂದು ಶ್ರೀಮಾತೆಯವರು ಒಂದೇ ಆಗಿದ್ದಾರೆ.– ಅಲ್ಲಿ ಅತಿಕಡಿಮೆಯದೂ ಇಲ್ಲ, ಬಹಳ ದೊಡ್ಡದಾದುದೂ ಇಲ್ಲ.

*

**ಪ್ರಶ್ನೆ:** *ಇಲ್ಲಿ ಕೆಲವರು ನಿಮ್ಮನ್ನು ಶ್ರೀಮಾತೆಯವರಿಗಿಂತ ಶ್ರೇಷ್ಠರೆಂದು ಪರಿಗಣಿಸುತ್ತಾರೆ, ಏಕೆ? ನೀವಿಬ್ಬರೂ ಒಂದೇ ಸ್ತರದಿಂದ ಬಂದಿದ್ದೀರಿ ಅಲ್ಲವೆ? ಇಂತಹ ಭಿನ್ನತೆಯನ್ನು ಕಂಡುಕೊಳ್ಳುವುದು ಮಾನವ ದೃಷ್ಟಿಯ ಮೇಲಿರುವ ಒಂದು ಪರದೆಯಿಂದ ಆಗುತ್ತದೆಯಲ್ಲವೆ?*

**ಶ್ರೀ ಅ :** ಮನಸ್ಸುಗಳು ಕೇವಲ ಮೇಲ್ಮೈಯಲ್ಲಿರುವ ವಿಷಯಗಳನ್ನು ನೋಡುತ್ತವೆ ಮತ್ತು ಅವುಗಳ ಹಿಂದೆ ಏನಿದೆ ಎಂಬುದನ್ನು ನೋಡಲು ಅವುಗಳಿಗೆ ಶಕ್ಯವಾಗುವುದಿಲ್ಲ.

*

ಶ್ರೀಮಾತೆಯವರು ಹಾಗೂ ನಾನು ಏಕೈಕರಾಗಿದ್ದೇವೆ, ಆದರೆ ಎರಡು ಭಿನ್ನ ದೇಹಗಳಲ್ಲಿದ್ದೇವೆ. ಎರಡೂ ದೇಹಗಳು ಯಾವಾಗಲೂ ಒಂದೇ ಕಾರ್ಯವನ್ನು ಮಾಡುವ ಆವಶ್ಯಕತೆ ಇರುವುದಿಲ್ಲ. ತದ್ವಿರುದ್ಧವಾಗಿ ಒಬ್ಬರು ಸಹಿ ಮಾಡುವುದಕ್ಕೆ ಸಾಕಾಗುವ ಹಾಗೆ ಇನ್ನೊಬ್ಬರು ಪ್ರಣಾಮ ಸ್ವೀಕರಿಸುವುದಕ್ಕೆ ಇಲ್ಲವೆ ಧ್ಯಾನದ ಕಾರ್ಯಕ್ರಮ ನಡೆಸುವುದಕ್ಕೆ ಕೆಳಗಿಳಿದು ಹೋಗುವುದು ಸಾಕಾಗುತ್ತದೆ.

*

ಶ್ರೀಮಾತೆಯವರು ಹಾಗೂ ನಾನು ಒಂದೇ ಆಗಿದ್ದೇವೆ, ಸಮನಾಗಿದ್ದೇವೆ. ಹಾಗೆಯೇ ಅವರು ಇಲ್ಲಿ ಪರಮೋಚ್ಚರಾಗಿದ್ದಾರೆ ಮತ್ತು ಕಾರ್ಯಕ್ಕಾಗಿ ಅವರು ಯಾವುದು ಒಳ್ಳೆಯ ವ್ಯವಸ್ಥೆ ಎಂದು ಭಾವಿಸುತ್ತಾರೋ ಆ ರೀತಿ ಕೈಕೊಳ್ಳಲು ಅವರಿಗೆ ಹಕ್ಕಿದೆ. ಯಾರೊಬ್ಬರಿಗೆ ಒಂದು ಕಾರ್ಯವನ್ನು ಒಪ್ಪಿಸಿದಾಗ ಅವನು ಅದರ ಮೇಲೆ ಹಕ್ಕನ್ನಾಗಲಿ, ಯಜಮಾನಿಕೆಯನ್ನಾಗಲಿ ಹೊಂದಿರುವುದಿಲ್ಲ. ಆಶ್ರಮ ಶ್ರೀಮಾತೆಯವರಿಂದ ಸೃಷ್ಟಿಸಿದ್ದಾಗಿದೆ, ಅವರಿಲ್ಲದೆ ಅದು ಅಸ್ತಿತ್ವಕ್ಕೆ ಬರುತ್ತಿರಲಿಲ್ಲ, ಅವರು ಕೈಕೊಳ್ಳುವ ಕಾರ್ಯ ಅವರು ಸೃಷ್ಟಿಸಿದ್ದಾಗಿದೆ, ಅದನ್ನು ಅವರಿಗೆ ಕೊಡಲಾಗಿಲ್ಲ ಮತ್ತು ಅದನ್ನು ಅವರಿಂದ ಯಾರೂ ತೆಗೆದುಕೊಳ್ಳಲಾರರು. ಈ ಪ್ರಾಥಮಿಕ ಸತ್ಯವನ್ನು ಅರಿತುಕೊಳ್ಳಲು ಪ್ರಯತ್ನಿಸು, ಆಗ ನಿನ್ನಲ್ಲಿ ಶ್ರೀಮಾತೆ–ಯವರನ್ನು ಕುರಿತು ಸರಿಯಾದ ಸಂಬಂಧ ಹಾಗೂ ಮನೋಭಾವನೆ ಬರುವವು.

**CWSA, 32/84** **– ಶ್ರೀ ಅರವಿಂದರು**

*

**ಯುಗಗಳಾದ್ಯಂತ ಒಟ್ಟಿಗೆ ಕಾರ್ಯ ಕೈಕೊಳ್ಳುತ್ತಿರುವುದು**

**ಪ್ರಶ್ನೆ :** *ನೀವು ಹಾಗೂ ಶ್ರೀಮಾತೆಯವರು ಪೃಥ್ವಿಯ ಮೇಲೆ ಅದು ಸೃಷ್ಟಿಗೊಂಡಂದಿನಿಂದ ಇರುತ್ತ ಬಂದಿದ್ದೀರಿ ಎಂದು ಹೇಳಲಾಗುತ್ತದೆ. ಆದರೆ ವೇಷಾಂತರದಲ್ಲಿದ್ದು ಇಷ್ಟೊಂದು ಲಕ್ಷಾನುವರ್ಷಗಳ ಕಾಲ ಏನನ್ನು ಕೈಕೊಳ್ಳುತ್ತ ಬಂದಿದ್ದೀರಿ? ನಾನು ವೇಷಾಂತರ ಎಂದು ಹೇಳುತ್ತೇನೆ. ಏಕೆಂದರೆ ಈಗ ಮಾತ್ರ ನಿಮ್ಮ ನಿಜವಾದ ಸ್ವಭಾವದಿಂದ ನಿಮ್ಮನ್ನು ಜಗತ್ತಿಗೆ ತೋರಿಸಿಕೊಡುತ್ತಿರುವಿರಿ.*

**ಶ್ರೀ ಅ :** ಉತ್ಕ್ರಾಂತಿಯನ್ನು ಮುಂದೆ ಕೊಂಡೊಯ್ಯುವುದಾಗಿದೆ.

**ಪ್ರಶ್ನೆ :** *"ಉತ್ಕ್ರಾಂತಿಯನ್ನು ಮುಂದೆ ಕೊಂಡೊಯ್ಯುವುದು" ಎಂದು ನೀವು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಇದನ್ನು ಹೆಚ್ಚು ಪೂರ್ತಿಯಾಗಿ ವಿವರಿಸುವಿರಾ?*

**ಶ್ರೀ ಅ :** ಅದರರ್ಥ ಮಾನವನ ಇತಿಹಾಸವನ್ನು ಇಡಿಯಾಗಿ ಬರೆದಿಡುವುದಾಗಿದೆ. ಉತ್ಕ್ರಾಂತಿಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ಅಲ್ಲಿ ವಿಶಿಷ್ಟ ಅವರೋಹಣಗಳಿರುವ ಹಾಗೆ ಭಗವಂತನ ಏನೋ ಒಂದು, ಒಂದಿಲ್ಲೊಂದು ದಿಶೆಯಲ್ಲಿ ಸಹಾಯ ನೀಡಲು ಅಲ್ಲಿರುತ್ತದೆ ಎಂದು ಮಾತ್ರ ಹೇಳಬಲ್ಲೆ.

**ಪ್ರಶ್ನೆ :** *ವಿಶೇಷವಾಗಿ ನೀವು ಬಾಹ್ಯದಲ್ಲಿ ಸಾಮಾನ್ಯ ಸತ್ತೆಗಳ ಹಾಗೆ ಜೀವಿಸಿದ್ದರೆ ಗತಕಾಲದ ಸಾಮಾನ್ಯ ಜನರು ನಿಮ್ಮ ಸಾನ್ನಿಧ್ಯವನ್ನು ಗುರುತಿಸದೇ ಇರಬಹುದು ಎಂಬುದು ನನಗೆ ಅರ್ಥವಾಗುತ್ತದೆ. ಆದರೆ ಶ್ರೀಕೃಷ್ಣ, ಬುದ್ಧ ಹಾಗೂ ಕ್ರಿಸ್ತ ಇವರು ಈ ಜಗತ್ತಿನಲ್ಲಿ ನಿಮ್ಮನ್ನು ಗುರುತಿಸದೆ ಇದ್ದುದು ಹೇಗೆ?*

**ಶ್ರೀ ಅ :** ಸಾನ್ನಿಧ್ಯವನ್ನೆಲ್ಲಿ ಹಾಗೂ ಯಾರಲ್ಲಿ?

ಅವರು ಭೇಟಿ ಮಾಡಿರದೆ ಇದ್ದರೆ ಗುರುತಿಸಲಾರರು ಮತ್ತು ಭೇಟಿ ಮಾಡಿದಾಗಲೂ ಕೂಡ ಈ ವ್ಯಕ್ತಿವಿಶಿಷ್ಟರ ಮೇಲೆ ತೂಗು ಹಾಕಿದ ಪರದೆಯನ್ನು ಶ್ರೀಮಾತೆಯವರು ಹಾಗೂ ನಾನು ತೆಗೆದು ಹಾಕುವುದಕ್ಕೆ ಹಾಗೂ ಹಿಂದಿರುವ ಭಗವಂತನನ್ನು ತೆರೆದು ತೋರಿಸುವುದಕ್ಕೆ ಕಾರಣವಿರಲಿಲ್ಲ. ಈ ಜೀವನಗಳು ಅಂತಹ ಉದ್ದೇಶಕ್ಕಾಗಿರಲಿಲ್ಲ.

**CWSA, 32/88–89** **– ಶ್ರೀ ಅರವಿಂದರು**

*

**ಪ್ರಶ್ನೆ :** *ಎಲ್ಲ ಕಾಲದಲ್ಲಿ ಶ್ರೀಮಾತೆಯವರು ಹಾಗೂ ನೀವು ಪೃಥ್ವಿಯ ಮೇಲೆ ಇದ್ದಿರಾದರೆ ಅದರರ್ಥ ಆ ಶ್ರೇಷ್ಠ ವ್ಯಕ್ತಿಗಳು ಅವರೋಹಣ ಮಾಡಿದಾಗ ನೀವು ಇಲ್ಲಿದ್ದಿರಿ ಎಂದಾಗುತ್ತದೆ. ನಿಮ್ಮ ಮೇಲಿನ ನಿಲುವಂಗಿ ಏನೇ ಇರಲಿ ನಿಮ್ಮ ಆಂತರಿಕ ಸತ್ತೆಯನ್ನು ದೈವತ್ವವನ್ನು ಅವರಿಂದ ಹೇಗೆ ಮರೆಯಲ್ಲಿರಿಸಿದಿರಿ?*

**ಶ್ರೀ ಅ :** ಆಂತರಿಕ ಆತ್ಮ ಅಂತಹ ಎಲ್ಲ ಜೀವನಗಳಿಂದ ಏಕೆ ಅಡಗಿಕೊಂಡಿರ–ಬಾರದು? ನಿನ್ನ ತರ್ಕಕ್ಕೆ ಸ್ವಲ್ಪ ಬಲ ಬರಬೇಕಾದರೆ, ಆಗ ಪೃಥ್ವಿಯ ಮೇಲೆ ನಮ್ಮ ಸಾನ್ನಿಧ್ಯ ಅವತಾರ ವ್ಯಕ್ತಿಗಳದ್ದಾಗಿರಬೇಕು, ಕೇವಲ ವಿಭೂತಿ ವ್ಯಕ್ತಿಗಳದಲ್ಲ.

**CWSA, 32/89** **– ಶ್ರೀ ಅರವಿಂದರು**

*

**ಪ್ರಶ್ನೆ :** *ನೀವು ಹಾಗೂ ಶ್ರೀಮಾತೆಯವರು ಪ್ರಾರಂಭದಿಂದ ಸತತ ಪೃಥ್ವಿಯ ಮೇಲೆ ಇರುತ್ತ ಬಂದಿದ್ದರಿಂದ ಒಬ್ಬರ ನಂತರ ಒಬ್ಬರಂತೆ ಬರುವ ಅವತಾರ ವ್ಯಕ್ತಿಗಳ ಆವಶ್ಯಕತೆ ಏನಿತ್ತು?*

**ಶ್ರೀ ಅ :** ನಾವು ಪೃಥ್ವಿಯ ಮೇಲೆ ಅವತಾರ ವ್ಯಕ್ತಿಗಳಾಗಿರಲಿಲ್ಲ.

*

**ಪ್ರಶ್ನೆ :** *ನೀವು ಪೃಥ್ವಿಯ ಮೇಲೆ ಅವತಾರ ವ್ಯಕ್ತಿಗಳಾಗಿರಲಿಲ್ಲ, ಆದಾಗ್ಯೂ ಉತ್ಕ್ರಾಂತಿಯನ್ನು ಮುಂದೆ ಕೊಂಡೊಯ್ಯುತ್ತಿದ್ದೆವೆಂದು ಹೇಳಿದ್ದೀರಿ. ಭಗವಂತನೇ ಸ್ವತಃ ಪೃಥ್ವಿಯ ಮೇಲೆ ಉತ್ಕ್ರಾಂತಿಯನ್ನು ಮುಂದೆ ಕೊಂಡೊಯ್ಯುತ್ತಿರುವಾಗ ಭಗವಂತನ ಭಾಗಗಳೇ ಆದ ಅವರು ಪೃಥ್ವಿಯ ಮೇಲೆ ಕೆಳಗಿಳಿದು ಬರುವ ಆವಶ್ಯಕತೆಯೇನಿತ್ತು?*

**ಶ್ರೀ ಅ :** ಒಂದು ವಿಶಿಷ್ಟ ಕಾರ್ಯವನ್ನು ಕೈಕೊಳ್ಳಬೇಕಾದಾಗ, ಉತ್ಕ್ರಾಂತಿಯಲ್ಲಿ ಸತ್ವಪರೀಕ್ಷೆಯ ಕಾಲ ಬಂದಾಗ ಅವತಾರ ವ್ಯಕ್ತಿಯ ಆವಶ್ಯಕತೆ ಇರುತ್ತದೆ. ಅವತಾರ ವ್ಯಕ್ತಿಯದು, ಅದು ವಿಶೇಷ ಪ್ರಕಟಣೆಯಾಗಿರುತ್ತದೆ. ಅದು ಹಾಗಿರುವಾಗ ಸಾಧಾರಣ ಮಾನವ ಮಿತಿಗಳಲ್ಲಿ ಭಗವಂತ ಅಂತರಂಗದಲ್ಲಿದ್ದು ವಿಭೂತಿಯಂತೆ ಕಾರ್ಯ–ಕೈಕೊಳ್ಳುತ್ತಾನೆ.


**CWSA, 28/485** **– ಶ್ರೀ ಅರವಿಂದರು**

*

ನಮ್ಮ ದೈವೀ ಪ್ರೇಮ ಸನಾತನ ದೈವೀ ಸತ್ಯವಾಗಿದೆ.

**CWM, 13/32** **– ಶ್ರೀಮಾತೆ**


*


When in your heart and
thought you will make
no difference between Sri Aurobindo
and me, when to think of Sri Aurobindo
will be to think of me and
to think of me will mean
to think of Sri Aurobindo inevitably,
when to see one will mean
inevitably to see the other, like
one and the same Person, —
then you will know that you
begin to be open to the supramental
force and consciousness.

ನಿಮ್ಮ ಹೃದಯದಲ್ಲಿ ಹಾಗೂ ಯೋಚನೆಯಲ್ಲಿ ನೀವು ಶ್ರೀ ಅರವಿಂದರು ಹಾಗೂ ನನ್ನ ನಡುವೆ ಯಾವ ಭೇದವನ್ನು ಮಾಡದಿದ್ದಾಗ, ಶ್ರೀ ಅರವಿಂದರನ್ನು ಕುರಿತು ನೀವು ಯೋಚಿಸುವುದು ನನ್ನನ್ನು ಕುರಿತು ಯೋಚಿಸಿದಂತಾದಾಗ, ನನ್ನನ್ನು ಕುರಿತು ಯೋಚಿಸುವುದು ಅನಿವಾರ್ಯವಾಗಿ ಶ್ರೀ ಅರವಿಂದರನ್ನು ಕುರಿತು ಯೋಚಿಸಿದಂತಾದಾಗ, ಒಬ್ಬರನ್ನು ನೋಡುವುದು ಅನಿವಾರ್ಯವಾಗಿ ಇನ್ನೊಬ್ಬರನ್ನು ಒಂದೇ ವ್ಯಕ್ತಿಯೆಂದು ನೋಡಿದಂತಾದಾಗ ಅತಿಮಾನಸ ಶಕ್ತಿ ಹಾಗೂ ಪ್ರಜ್ಞೆಗಳಿಗೆ ನೀವು ತೆರೆದುಕೊಳ್ಳಲು ಪ್ರಾರಂಭಿಸಿದ್ದೀರಿ ಎಂಬುದನ್ನು ತಿಳಿದುಕೊಳ್ಳುವಿರಿ.

**– ಶ್ರೀಮಾತೆ**

*



21-2-68

The reminiscenses will
be short.
I came to India to meet Sri Aurobindo.
I remained in India to live with Sri Aurobindo.
When he left his body, I continued to live here
in order to do his work which is, by serving
the Truth and enlightening mankind,
to hasten the rule of the Divine's
Love upon earth.


## ಫೆಬ್ರುವರಿ 21, 1968

**ಸ್ಮರಣೆಗಳ ವಿವರ ಚಿಕ್ಕವಾಗಿರುವವು**

ಶ್ರೀ ಅರವಿಂದರನ್ನು ಭೇಟಿ ಮಾಡಲು ನಾನು ಭಾರತಕ್ಕೆ ಬಂದೆ. ಶ್ರೀ ಅರವಿಂದರೊಡನೆ ಜೀವಿಸಲು ನಾನು ಭಾರತದಲ್ಲಿಯೇ ಉಳಿದುಕೊಂಡೆ. ಅವರು ದೇಹತ್ಯಾಗ ಮಾಡಿದ ನಂತರ ಇಲ್ಲಿಯೇ ಜೀವಿಸುವುದನ್ನು ನಾನು ಮುಂದುವರಿಸಿದೆ. ಅದರಿಂದಾಗಿ ಅವರ ಕಾರ್ಯವನ್ನು ಕೈಕೊಳ್ಳುವಂತಾಯಿತು, ಅದೆಂದರೆ ದೈವೀ ಸತ್ಯಕ್ಕೆ ಸೇವೆ ಸಲ್ಲಿಸುವುದು ಹಾಗೂ ಮನುಕುಲಕ್ಕೆ ಜ್ಞಾನೋದ–ಯವನ್ನುಂಟು ಮಾಡುವುದು ಆಗಿತ್ತು, ಅದು ಪೃಥ್ವಿಯ ಮೇಲೆ ದೈವೀ ಪ್ರೇಮದ ಆಳಿಕೆ ತೀವ್ರಗತಿಯಿಂದ ಬರುವಂತೆ ಮಾಡಲಿದೆ.

**CWM, 13/47** **– ಶ್ರೀಮಾತೆ**

*



Do not ask questions about the details of the material existence of this body; they are in themselves of no interest and must not attract attention.


Throughout all this life, knowingly or unknowingly, I have been what the Lord wanted me to be, I have done what the Lord wanted me to do. That alone matters.

ಈ ದೇಹದ ಪ್ರಾಪಂಚಿಕ ಅಸ್ತಿತ್ವದ ವಿವರಗಳನ್ನು ಕುರಿತು ಪ್ರಶ್ನೆಗಳನ್ನು ಕೇಳುವುದು ಬೇಡ, ಅವು ತಮ್ಮಲ್ಲೇ ಸ್ವತಃ ಸ್ವಾರಸ್ಯಕರವಾಗಿಲ್ಲ ಮತ್ತು ನಿಮ್ಮ ಲಕ್ಷ್ಯವನ್ನು ಅವು ತಮ್ಮತ್ತ ಸೆಳೆಯಬಾರದು.

ಈ ಜೀವನದಾದ್ಯಂತ ತಿಳಿದೋ, ತಿಳಿಯದೆಯೋ ದೈವೀಪ್ರಭು ನಾನೇನಾಗಲಿ ಎಂದು ಬಯಸಿದ್ದನೋ ಅದು ನಾನಾಗಿದ್ದೇನೆ. ದೈವೀ ಪ್ರಭು ನಾನೇನನ್ನು ಕೈಕೊಳ್ಳಲಿ ಎಂದು ಬಯಸಿದ್ದನೋ ಅದನ್ನು ನಾನು ಕೈಕೊಂಡಿದ್ದೇನೆ. ಮಹತ್ವದ್ದಾದ ವಿಷಯ ಅದೊಂದೇ.

**CWM, 13/45** **– ಶ್ರೀಮಾತೆ**

*



ಶ್ರೀಮಾತೆಯವರು ಹಾಗೂ ಶ್ರೀ ಅರವಿಂದರು ನನಗೆ ಆಶ್ರಯದಾತರು.

**CWM, 13/32**

*

**ಮನುಕುಲದ ಭಾರ**

**ಪ್ರಶ್ನೆ :** *ಶ್ರೀಮಾತೆಯವರು ನನ್ನ ಬಳಿ ಸರಿಯಾದ ಮನೋಭಾವ ಕುರಿತು ಮಾತನಾಡಿದರು, ಅವರ ಪ್ರಕಾರ ಅದು ಉದ್ವಿಗ್ನತೆ, ಎಳೆತ (strain) ಗಳನ್ನು ಹೊಂದಿರದೆ ಇರುವುದು, ಉಲ್ಲಾಸದಿಂದ ತುಂಬಿಕೊಂಡಿರುವುದು, ಸ್ವಯಂಪ್ರೇರಿತವಾಗಿರುವುದು ಹಾಗೂ ಹೂವು ಪ್ರಕಾಶಕ್ಕೆ ತೆರೆದುಕೊಂಡ ಹಾಗಿರುವುದು ಇದೆಲ್ಲ ಆಗಿದೆ. ಇದು ಅವತಾರ ತಳೆದ ವ್ಯಕ್ತಿಗಳಾದ ನಿಮಗೆ ಹಾಗೂ ಶ್ರೀಮಾತೆಯವರಿಗೆ ಹೆಚ್ಚು ಸರಿಯಾದದ್ದು, ಬಡ ಮರ್ತ್ಯರಾದಂತಹ ನಾವು ಈ ಅಸ್ಪಷ್ಟ ಆದೇಶವನ್ನು ಮಾರ್ಗದರ್ಶನವೆಂದು ಅನುಸರಿಸುವುದು ಹೇಗೆ?*

*ಸತತ ಪ್ರಾರ್ಥನೆ ಮಾಡುವುದು; ಶ್ರಮ ಸಾಧ್ಯ ಧ್ಯಾನ ಕೈಕೊಳ್ಳುವುದು, ತಪ್ಪಾದ ಚಲನೆಗಳನ್ನು ತಿರಸ್ಕರಿಸಲು ಸತತ ಪ್ರಯತ್ನ ಮಾಡುವುದು ಇವುಗಳ ಮೂಲಕವಲ್ಲದೆ ಈ ಮನೋಭಾವ ಹೊಂದುವುದು ಹೇಗೆ?*

**ಶ್ರೀ ಅ :** ನಿನಗೆ ಮತ್ತು ನಿನ್ನಂತಹರಿಗೆ ಅದು ಕಠಿಣವಾಗಿದೆ ಮತ್ತು ಅದನ್ನು ನನ್ನಂತಹ ಹಾಗೂ ಶ್ರೀಮಾತೆವರಂತಹ ಅವತಾರ ವ್ಯಕ್ತಿಗಳು ಕೈಕೊಳ್ಳಬಹುದು

ಎಂದು ನೀನು ಹೇಳುತ್ತೀ. ಇದು ವಿಚಿತ್ರ ತಪ್ಪು ಕಲ್ಪನೆ. ಏಕೆಂದರೆ ಅದು ತದ್ವಿರುದ್ಧವಾಗಿ ಅತ್ಯಂತ ಸುಲಭ ಹಾಗೂ ಅತ್ಯಂತ ಸರಳವಾದ ಹಾಗೂ ಬಹಳ ನೇರವಾದ ಮಾರ್ಗ. ಅದನ್ನು ಯಾರು ಬೇಕಾದರೂ ಕೈಕೊಳ್ಳಬಹುದು, ಕೈಕೊಳ್ಳ–ಬಯಸುವವನು ತನ್ನ ಮನಸ್ಸನ್ನು ಹಾಗೂ ಪ್ರಾಣಿಕವನ್ನು ಅಚಂಚಲಗೊಳಿಸಬೇಕು. ನಿನ್ನಲ್ಲಿರುವ ಕ್ಷಮತೆಯ 1/10ದಷ್ಟು ಕ್ಷಮತೆಯುಳ್ಳವನೂ ಕೂಡ ಅದನ್ನು ಕೈಕೊಳ್ಳಬಹುದು. ನನ್ನನ್ನು ಹಾಗೂ ಶ್ರೀಮಾತೆಯವರನ್ನು ಕುರಿತು ಹೇಳುವು–ದಾದರೆ ನಾವು ಎಲ್ಲ ಬಗೆಯ ಮಾರ್ಗಗಳನ್ನು ಪ್ರಯತ್ನಿಸಿ ನೋಡಬೇಕಾಗಿತ್ತು, ಎಲ್ಲ ವಿಧಾನಗಳನ್ನು ಅನುಸರಿಸಬೇಕಾಗಿತ್ತು, ಗುಡ್ಡದಷ್ಟು ಕಷ್ಟಗಳ ಮೇಲೆ ವಿಜಯ ಸಾಧಿಸಬೇಕಾಗಿತ್ತು. ನೀನು ಇಲ್ಲವೆ ಆಶ್ರಮದಲ್ಲಿರುವ ಬೇರೆ ಯಾರಾದರೂ, ಹೊರಗಿರುವ ಯಾರಾದರೂ ಹೊರಲು ಅದು ಹೆಚ್ಚು ಭಾರವಾಗಿದ್ದಿತು, ಸಮರಗಳಲ್ಲಿ ಹೋರಾಡಬೇಕಾಗಿದ್ದಿತು, ನೋವುಗಳನ್ನು ಸಹಿಸಬೇಕಾಗಿದ್ದಿತು. ಅಂಟಿಕೊಂಡು ಹೋಗಬೇಕಾದ, ನುಗ್ಗಲಾಗದ ಕೆಸರು ನೆಲ, ಮರುಭೂಮಿ ಹಾಗೂ ಅಡವಿಗಳಿದ್ದವು, ಜಯಿಸಬೇಕಾದ ವಿರೋಧೀ ಮೊತ್ತಗಳಿದ್ದವು, ಅಂತಹ ಕಾರ್ಯವನ್ನು ನಮಗಿಂತ ಮೊದಲಿದ್ದ ಯಾರೂ ಅದನ್ನು ಕೈಕೊಂಡಿರಲಿಲ್ಲ ಎಂಬುದರ ಬಗ್ಗೆ ನನಗೆ ನಿಶ್ಚಿತತೆ ಇದೆ. ಏಕೆಂದರೆ ನಮ್ಮ ಕಾರ್ಯದರಂತಹ ದೈವೀ ಮಾರ್ಗದ ನೇತಾರ ಭಗವಂತನನ್ನು ಕೆಳಗಿಳಿಸಿ ತರಬೇಕಾಗುವುದು, ಪ್ರತಿನಿಧಿಸ–ಬೇಕಾಗುವುದು ಹಾಗೂ ಮೈವೆತ್ತಬೇಕಾಗುವುದು, ಅಷ್ಟೇ ಅಲ್ಲದೆ ಮನುಕುಲ–ದಲ್ಲಿರುವ ಆರೋಹಣದ ಅಂಶವನ್ನು ಕೂಡ ಪ್ರತಿನಿಧಿಸಬೇಕಾಗುವುದು ಮತ್ತು ಮನುಕುಲದ ಭಾರವನ್ನು ಪೂರ್ತಿಯಾಗಿ ಹೊರಬೇಕಾಗುವುದು, ಕೇವಲ ಒಂದು ಲೀಲೆಯಲ್ಲಿ ಅನುಭವ ಪಡೆಯುವುದಷ್ಟೇ ಅಲ್ಲ, ಕಠಿಣ ರೀತಿಯಲ್ಲಿ ಶ್ರದ್ಧಾಪೂರ್ವಕವಾಗಿ ಎಲ್ಲ ತೊಂದರೆಯನ್ನು, ವೈರುಧ್ಯವನ್ನು, ದಿಗ್ಭ್ರಮೆಗೊಳ–ಗಾದುದನ್ನು ತಡೆಯುಂಟಾದುದನ್ನು, ನಿಧಾನ ಗತಿಯಿಂದ ಮಾರ್ಗದಲ್ಲಿ ಸಾಧ್ಯ–ವಾಗುವ ಶ್ರಮದಿಂದ ಕೂಡಿದ ವಿಜಯ ದೊರಕಿಸುವುದನ್ನು ಕುರಿತು ಅನುಭವ ಪಡೆಯುವುದಿರುತ್ತದೆ. ಆದರೆ ಇತರರ ಪೂರ್ತಿ ಅನುಭವದಲ್ಲಿ ಅದೆಲ್ಲವನ್ನೂ ಮತ್ತೆ ಮತ್ತೆ ಪುನರಾವರ್ತಿಸುವ ಆವಶ್ಯಕತೆ ಇಲ್ಲ. ಅದು ಏಕೆಂದರೆ ನಮ್ಮಲ್ಲಿ ಪೂರ್ತಿ ಅನುಭವ ಇದೆ ಮತ್ತು ನಾವು ಹೆಚ್ಚು ನೇರವಾದ ಹಾಗೂ ಸುಲಭವಾದ ಮಾರ್ಗವನ್ನು ಅನುಸರಿಸಲು ಇಷ್ಟಪಡುವವರಿಗೆ ತೋರಿಸಿಕೊಡಬಲ್ಲೆವು. ಅದು

ಏಕೆಂದರೆ ನಮ್ಮ ಅನುಭವವನ್ನು ಭಯವಿಸ್ಮಿತಗೊಳಿಸುವ ಬೆಲೆ ತೆತ್ತು ಗಳಿಸಿದ್ದಾಗಿದೆ, ಅದರಿಂದಾಗಿ ನಿನಗೆ ಹಾಗೂ ಇತರರಿಗೆ ಒತ್ತಾಯಪೂರ್ವಕ ಹೇಳಬಲ್ಲೆವು: "ಚೈತ್ಯಾತ್ಮಿಕ ಮನೋಭಾವವನ್ನು ಹೊಂದಿರಿ, ನೇರವಾದ ರವಿಪ್ರಕಾಶಿತ ಮಾರ್ಗವನ್ನು ಅನುಸರಿಸಿರಿ, ಭಗವಂತ ನಿಮ್ಮನ್ನು ಪ್ರಕಟ ರೀತಿಯಲ್ಲಿ ಇಲ್ಲವೆ ರಹಸ್ಯವಾಗಿ ಎತ್ತಿಹಿಡಿದಿರುತ್ತಾನೆ– ರಹಸ್ಯವಾಗಿಯಾದರೆ ಅವನು ಇನ್ನೂ ಒಳ್ಳೆಯ ಸಮಯದಲ್ಲಿ ತನ್ನನ್ನು ತೋರಿಸುತ್ತಾನೆ– ಕಠಿಣವಾದ, ಅಡೆತಡೆಗೊಳಗಾದ, ಸುತ್ತಿಗೊಳಗಾದ ಮತ್ತು ಕಠಿಣ ಪ್ರಯಾಣದ ಮೇಲೆ ಒತ್ತುಕೊಡುವುದು ಬೇಡ."

*

ಶ್ರೀಮಾತೆಯವರ ತೊಂದರೆಗಳು ಅವರವೇ ಅಲ್ಲ, ಅವರು ಇತರರ ತೊಂದರೆಗಳನ್ನು ಕೂಡ ತಮ್ಮ ಮೇಲೆ ತೆಗೆದುಕೊಳ್ಳುತ್ತಾರೆ, ಆ ತೊಂದರೆಗಳು ಸರ್ವಸಾಧಾರಣ ಕಾರ್ಯದಲ್ಲಿ, ಪರಿವರ್ತನೆಗಾಗಿರುವ ಕ್ರಿಯೆಯಲ್ಲಿ ಅಂತರ್ನಿಹಿತವಾಗಿರುತ್ತವೆ. ಅದು ಹಾಗಿರದೆ ಹೋಗಿದ್ದರೆ ಅದು ಬಹಳ ಭಿನ್ನವಾದ ವಿಷಯವಾಗುತ್ತಿತ್ತು.

*

**ತೊಂದರೆಗಳು ಹಾಗೂ ಸೂರ್ಯಪ್ರಕಾಶಿತ ಮಾರ್ಗ**

ರವಿಪ್ರಕಾಶಿತ ಮಾರ್ಗದ ಸಾಧ್ಯತೆ ನನ್ನ ಶೋಧ ಇಲ್ಲವೆ ಮೂಲ ಅನ್ವೇಷಣೆ ಎಂದು ಯೋಚಿಸುವುದರಲ್ಲಿ ನೀನು ಬಹಳ ತಪ್ಪು ಮಾಡುತ್ತಿರುವಿ. ಮೂವತ್ತು ವರ್ಷಗಳ ಹಿಂದೆ ನಾನು ಓದಿದ, ಯೋಗ ಕುರಿತು ಇದ್ದ ಪುಸ್ತಕಗಳಲ್ಲಿ ಅಂಧಕಾರದ ಮಾರ್ಗ ಹಾಗೂ ರವಿಪ್ರಕಾಶಿತ ಮಾರ್ಗ ಇವುಗಳನ್ನು ಕುರಿತು ಹೇಳಿದ್ದರು ಮತ್ತು ಎರಡನೆಯದು ಪರಮೋಚ್ಚವಾದದ್ದೆಂದು ಒತ್ತಿ ಹೇಳಿದ್ದರು.

ಮತ್ತು ಅದು, ನಾನೇ ಸ್ವತಃ ರವಿಪ್ರಕಾಶಿತ ಮಾರ್ಗದ ಮೇಲೆ ಹೆಜ್ಜೆ ಇರಿಸಿದ್ದೇನೆ, ವೇದನೆಯ ಹಾಗೂ ಅಪಾಯದ ಮಾರ್ಗದಿಂದ ಹಿಂಜರಿದಿದ್ದೇನೆ ಎಂಬ ಕಾರಣದಿಂದಲ್ಲ. ಈ ವಿಷಯಗಳನ್ನು ಕುರಿತು ನನ್ನ ಪೂರ್ತಿ ಪಾಲಿತ್ತು ಮತ್ತು ಶ್ರೀಮಾತೆಯವರು ತಮ್ಮ ಪೂರ್ತಿಪಾಲಿನ ಹತ್ತುಪಟ್ಟು ಪಾಲನ್ನು ಪಡೆದಿದ್ದರು. ಇದು ಏಕೆಂದರೆ ದೈವೀಮಾರ್ಗವನ್ನು ಅರಸುವವರು ಈ ವಿಷಯ–

ಗಳನ್ನು ಎದುರಿಸಬೇಕಾಗಿತ್ತು ಹಾಗೂ ಅವುಗಳ ಮೇಲೆ ಜಯಸಾಧಿಸಬೇಕಾಗಿತ್ತು. ನಾವು ಮಾರ್ಗದಲ್ಲಿ ಕಂಡುಕೊಂಡಿರದ ಯಾವ ತೊಂದರೆಯೂ ಸಾಧಕನಿಗೆ ಬರುವುದಿಲ್ಲ, ಜಯ ಸಾಧಿಸುವ ಮೊದಲು ಅಂತಹ ಹಲವಾರು ತೊಂದರೆಗಳ ಮೇಲೆ ನಾವು ನೂರಾರು ಸಲ (ಕಡಿಮೆ ಮಾಡಿ ಹೇಳಿದ್ದು) ಹೋರಾಡಬೇಕಾಗಿತ್ತು, ಇನ್ನೂ ಹಲವಾರು ವಿರೋಧಿಸುತ್ತ ಉಳಿದುಕೊಂಡಿವೆ, ಅಲ್ಲಿ ಪರಿಪೂರ್ಣ ಪರಿಪೂರ್ಣತೆ ಇರುವವರೆಗೆ ಇರಲು ಅವುಗಳಿಗೆ ಹಕ್ಕಿದೆ. ಆದರೆ ಇತರರಿಗಾಗಿ ಅವುಗಳ ಅನಿವಾರ್ಯವಾದ ಆವಶ್ಯಕತೆಯನ್ನು ನಾವು ಎಂದಿಗೂ ಒಪ್ಪಿಕೊಂಡಿಲ್ಲ. ವಾಸ್ತವದಲ್ಲಿ ಈ ನಂತರ ಆ ಮಾರ್ಗವನ್ನು ಇತರರಿಗೆ ಹೆಚ್ಚು ಸುಲಭವಾದದ್ದನ್ನಾಗಿ ಮಾಡುವುದಕ್ಕಾಗಿ ಆ ಭಾರವನ್ನು ನಾವು ಹೊತ್ತಿದ್ದೇವೆ. ಆ ಉದ್ದೇಶವನ್ನು ಮುಂದಿಟ್ಟುಕೊಂಡು ಒಮ್ಮೆ ಶ್ರೀಮಾತೆಯವರು ಮಾರ್ಗಕ್ಕಾಗಿ ಏನೆಲ್ಲ ತೊಂದರೆ–ಗಳಿವೆಯೋ, ವೇದನೆಗಳಿವೆಯೋ ಅವೆಲ್ಲವನ್ನು ತಮ್ಮ ಮೇಲೆ ಹೊರಿಸೆಂದು ಇನ್ನೊಬ್ಬರ ಮೇಲೆ ಬೇಡ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿದ್ದರು. ಇಲ್ಲಿಯವರೆಗೆ ಕೇಳಿ ತಿಳಿದು ಬಂದ ವಿಷಯವೆಂದರೆ ವರ್ಷಗಳ ಕಾಲ ಕೈಕೊಂಡ ದೈನಂದಿನ ಹಾಗೂ ಭಯಾನಕ ಹೋರಾಟಗಳಿಂದಾಗಿ ಯಾರು ಇಡಿಯಾಗಿ, ನಿಷ್ಕಪಟರಾಗಿ, ಗಾಢ ನಂಬಿಕೆಯನ್ನು ಅವರಲ್ಲಿ ಇರಿಸುವುರೋ ಅವರು ರವಿಪ್ರಕಾಶಿತ ಮಾರ್ಗವನ್ನು ಅನುಸರಿಸಲು ಶಕ್ತರಾಗಿದ್ದಾರೆ. ಅದನ್ನು ಸಾಧಿಸಲು ಶಕ್ತರಾಗದವರೂ ಕೂಡ ತಮ್ಮ ವಿಶ್ವಾಸವನ್ನಿರಿಸಿದರೆ ತಮ್ಮ ಮಾರ್ಗ ಹಠಾತ್ತನೆ ಸುಲಭವಾಗುತ್ತದೆಂಬುದನ್ನು ಕಂಡುಕೊಳ್ಳುತ್ತಾರೆ, ಅದು ಮತ್ತೊಮ್ಮೆ ಕಠಿಣವಾದರೆ ಅಪನಂಬಿಕೆ, ಬಂಡಾಯವೇಳುವಿಕೆ, ಅಭಿಮಾನ ಇಲ್ಲವೆ ಇತರ ಅಂಧಕಾರಗಳು ಅವರ ಮೇಲೆ ಎರಗಿದಾಗ ಮಾತ್ರ ಆಗುತ್ತದೆ. ರವಿ ಪ್ರಕಾಶಿತ ಮಾರ್ಗ ಒಟ್ಟಿನಲ್ಲಿ ಕಟ್ಟುಕತೆಯಲ್ಲ.

**CWSA, 32/95–96** **– ಶ್ರೀ ಅರವಿಂದರು**

*

**ಶ್ರೀಮಾತೆಯವರು ಹಾಗೂ ಶ್ರೀ ಅರವಿಂದರ ಮೂಲಕ ಸಾಧನೆ ಕೈಕೊಳ್ಳುವುದು**

ನಾನು ಉತ್ತರ ನೀಡಲಾಗದ ಪ್ರಶ್ನೆಗಳು ಇವಾಗಿವೆ. ಇಂತಹ ಪ್ರಶ್ನೆಗಳಿಗೆ ಉತ್ತರ ನೀಡುವುದು ನನಗಾಗಿ ಇರುವುದಿಲ್ಲ. ಇಲ್ಲಿ ನಮ್ಮ ಯೋಗದ ಗುರಿ

ಅತಿಮಾನಸ ದೈವೀ ಸತ್ಯವನ್ನು ಕೆಳಗಿಳಿಸಿ ತರುವುದಾಗಿದೆ (ಉಳಿದೆಲ್ಲ ಗುರಿಗಳು ಹಾಗೂ ಹಂತಗಳು ಪ್ರಾಥಮಿಕ ಹಾಗೂ ಉಪಕರಣ ರೂಪದವು) ಹಾಗೂ ಅದರ ಕ್ರಿಯೆಯನ್ನು ಸಂಘಟಿಸುವುದಾಗಿದೆ. ಅದನ್ನು ನಾನು ಮತ್ತು ಶ್ರೀಮಾತೆಯವರು ಕೈಕೊಳ್ಳಬೇಕೆಂಬ ಭಾವನೆಯಿಂದ ಆಶ್ರಮ ಮುಂದುವರಿಯುತ್ತದೆ ಮತ್ತು ಈ ಗುರಿಯನ್ನು ಹಾಗೂ ಈ ದೈವೀ ಸತ್ಯದ ಅವರೋಹಣವನ್ನು ಒಪ್ಪಿಕೊಳ್ಳುವುದರಲ್ಲಿ ಸಾಧಕ ನನ್ನನ್ನು ಹಾಗೂ ಶ್ರೀಮಾತೆಯವರನ್ನು ಒಪ್ಪಿಕೊಳ್ಳುತ್ತಾನೆ ಮತ್ತು ಅವನು ನಮ್ಮಿಂದ ಮಾರ್ಗದರ್ಶನ ಪಡೆಯಬೇಕು ಮತ್ತು ಅವರೋಹಣವಾಗು–ತ್ತಿರುವುದನ್ನು ಸ್ವೀಕರಿಸಬೇಕು, ಅದು ಹಾಗಿರದಿದ್ದರೆ ಅವನು ಸಿದ್ಧಿಸಿಕೊಳ್ಳುವುದಿಲ್ಲ. ಅವರು ಇನ್ನಿತರ ಸತ್ಯವನ್ನು ಬಯಸುತ್ತಿದ್ದರೆ, ಅದನ್ನು ಕೈಕೊಳ್ಳಲು ಮುಕ್ತರಾಗಿ–ರುತ್ತಾರೆ, ಆದರೆ ಅದನ್ನು ಇಲ್ಲಿ ಕೈಕೊಳ್ಳಲಾರರು, ಏಕೆಂದರೆ ಅವರು ಇಲ್ಲಿ ಯಶಸ್ವಿ–ಯಾಗುವುದಿಲ್ಲ, ಇಲ್ಲಿ ದೈವೀ ಶಕ್ತಿ ಕಾರ್ಯಕೈಕೊಳ್ಳುತ್ತಿರುವುದರ ಗುರಿ ಅದಲ್ಲ. ನಮ್ಮಿಂದ ಬರುತ್ತಿರುವ ಸಾಮರ್ಥ್ಯವಲ್ಲದ ಬೇರೇ ಏನೋ ಒಂದನ್ನು ಅನುಸರಿಸಲು ಆ ಸಾಮರ್ಥ್ಯವನ್ನು ತಿರಸ್ಕರಿಸಿದರೆ ಅದು ಅವರನ್ನು ಈ ಮಾರ್ಗದಿಂದ ಬೇರೆಡೆ ಕರೆದೊಯ್ಯುತ್ತದೆ ಮತ್ತು ಅವರು ನಮ್ಮ ಸಾನ್ನಿಧ್ಯದಿಂದ ಹಾಗೂ ಯೋಗದಿಂದ ಪ್ರಯೋಜನ ಪಡೆಯುವುದಿಲ್ಲ ಮತ್ತು ಇಲ್ಲಿ ಕೈಕೊಳ್ಳ–ಬೇಕಾದ ಕಾರ್ಯದಲ್ಲಿ ಸಾಮರಸ್ಯ ಹೊಂದಿರುವ ಅಂಶವಾಗುವುದಿಲ್ಲ. ಈ ವಿಷಯ ಕುರಿತು ನಾನು ಹೇಳಲು ತಯಾರಾಗಿರುವುದು ಅದಷ್ಟೇ.

**CWSA, 32/98** **– ಶ್ರೀ ಅರವಿಂದರು**

*

**ಶ್ರೀಮಾತೆಯವರಿಗೆ ಹಾಗೂ ಶ್ರೀ ಅರವಿಂದರಿಗೆ ತೆರೆದಿರಿಸಿಕೊಂಡಿರುವಿಕೆ**

**ಪ್ರಶ್ನೆ :** *ಶ್ರೀ ಅರವಿಂದರಿಗೆ ಇಲ್ಲವೆ ಶ್ರೀಮಾತೆಯವರಿಗೆ ನಾವು ಪತ್ರ ಬರೆದರೆ ಅದು ಒಂದೇ ಆಗಿರುತ್ತದೆಯೆ? ಅವರಿಬ್ಬರೂ ಒಂದೇ ಎಂದು ಕೆಲವರು ಹೇಳುತ್ತಾರೆ, ಹಾಗಾಗಿ ನಾವು ಶ್ರೀ ಅರವಿಂದರಿಗೆ ಇಲ್ಲವೆ ಶ್ರೀಮಾತೆಯವರಿಗೆ ಪತ್ರ ಬರೆದರೆ ಶ್ರೀಮಾತೆಯವರಿಗೆ ತೆರೆದಿರಿಸಿಕೊಂಡಿರುತ್ತೇವೆ, ಇದು ಸರಿಯಾದದ್ದೇ?*

**ಶ್ರೀ ಅ :** ನಾವಿಬ್ಬರೂ ಒಂದೇ ಎನ್ನುವುದು ನಿಜವಾದದ್ದು, ಆದರೆ ಅಲ್ಲಿ ಸಂಬಂಧ

ಕೂಡ ಇರುತ್ತದೆ, ಅದು ಶ್ರೀಮಾತೆಯವರಿಗೆ ಮನುಷ್ಯ ತೆರೆದಿರಿಸಿಕೊಂಡಿರಬೇಕು ಎಂಬುದನ್ನು ಅವಶ್ಯವಾದದ್ದನ್ನಾಗಿ ಮಾಡುತ್ತದೆ.

**ಪ್ರಶ್ನೆ :** *ಶ್ರೀ ಅರವಿಂದರಿಗೆ ತೆರೆದಿರಿಸಿಕೊಂಡಿದ್ದು ಶ್ರೀಮಾತೆಯವರಿಗೆ ತೆರೆದಿರಿಸಿ–ಕೊಂಡಿರುವುದಿಲ್ಲ ಎಂಬುದು ಸಂಭವಿಸಬಹುದೆ? ಶ್ರೀಮಾತೆಯವರಿಗೆ ತೆರೆದಿರಿಸಿ–ಕೊಂಡವನು ಶ್ರೀ ಅರವಿಂದರಿಗೆ ತೆರೆದಿರಿಸಿಕೊಂಡಿರುತ್ತಾನೆಯೆ?*

**ಶ್ರೀ ಅ :** ಶ್ರೀಮಾತೆಯವರನ್ನು ಕುರಿತಾದ ಪ್ರಸ್ತಾಪ ಸರಿಯಾಗಿದೆ. ಮನುಷ್ಯ ಶ್ರೀ ಅರವಿಂದರಿಗೆ ತೆರೆದಿರಿಸಿಕೊಂಡಿದ್ದು ಶ್ರೀಮಾತೆಯವರಿಗೆ ತೆರೆದಿರಿಸಿಕೊಂಡಿರದೆ ಇದ್ದರೆ ಅವನು ನಿಜವಾಗಿ ಶ್ರೀ ಅರವಿಂದರಿಗೆ ತೆರೆದಿರಿಸಿಕೊಂಡಿರುವುದಿಲ್ಲ.

**ಪ್ರಶ್ನೆ :** *ಮನುಷ್ಯ ಶ್ರೀಮಾತೆಯವರ ಶಕ್ತಿ ಆಳಿಕೆ ನಡೆಸಲು ಅನುವು ಮಾಡಿಕೊಡಬೇಕು ಎಂದು ಶ್ರೀ ಅರವಿಂದರು ಬಹಳಷ್ಟು ಸಲ ಹೇಳಿದ್ದಾರೆ. ಅದರರ್ಥ ಅವರಿಬ್ಬರ ಶಕ್ತಿಗಳ ನಡುವೆ ವ್ಯತ್ಯಾಸವಿದೆ ಎಂದಾಗುತ್ತದೆಯೆ?*

**ಶ್ರೀ ಅ :** ಏಕೈಕ ಶಕ್ತಿಯಿದೆ, ಅದು ಶ್ರೀಮಾತೆಯವರ ಶಕ್ತಿ–ಇಲ್ಲವೆ ನಿಮಗಿಷ್ಟವಾದರೆ ಶ್ರೀಮಾತೆಯವರು ಶ್ರೀ ಅರವಿಂದರ ಶಕ್ತಿ ಎಂದು ಹೇಳಬಹುದು.

**CWSA, 32/104** **– ಶ್ರೀ ಅರವಿಂದರು**

*

**ಶ್ರೀಮಾತೆಯವರಿಗೆ ಹಾಗೂ ಶ್ರೀ ಅರವಿಂದರಿಗೆ ಕರೆಕೊಡುವುದು**

**ಪ್ರಶ್ನೆ :** *ಶ್ರೀಮಾತೆಯವರನ್ನು ಕುರಿತು ಅಭೀಪ್ಸೆ ಪಡುತ್ತಿದ್ದಾಗ ಹಾಗೂ ಅವರ ಹೆಸರನ್ನು ಜಪಿಸುತ್ತಿದ್ದಾಗ ನಿಮ್ಮ ಹೆಸರೂ ಕೂಡ ಅದರೊಳಗೆ ಬರುತ್ತದೆ. ಅದು ವಿಚಿತ್ರವಾದದ್ದು.*

**ಶ್ರೀ ಅ :** ನೀವು ಯಾವಾಗಲೂ ಶ್ರೀಮಾತೆಯವರನ್ನು ಕುರಿತು ಅಭೀಪ್ಸೆ ಪಡಬೇಕು, ಏಕೆಂದರೆ ಶಕ್ತಿ ಅವರದು, ಅದು ಮಾತ್ರ ನಿಮಗೆ ಭಗವಂತನನ್ನು ಕುರಿತು ನಿಜವಾದ ಸಿದ್ಧಿಯನ್ನು ತಂದುಕೊಡುವುದು. ನಿಮ್ಮ ಮನಸ್ಸು ಹಾಗಿರದೇ ಇದ್ದುದನ್ನು ಕೈಕೊಳ್ಳಲು ಬಯಸಿದಾಗ ನೀವು ಅದನ್ನು ನಿಯಂತ್ರಿಸಬೇಕು. ಶ್ರೀಮಾತೆಯವರು ಹಾಗೂ ನನ್ನ ನಡುವೆ ಯಾವುದೇ ಬಗೆಯ ಪ್ರತ್ಯೇಕತೆಯನ್ನು (ನನ್ನ ಹೆಸರನ್ನು

ಅವರ ಹೆಸರಿನ ಬದಲಾಗಿ ಇರಿಸಿದಾಗ) ಒಪ್ಪಿಕೊಳ್ಳಬಾರದು– ಏಕೆಂದರೆ ಅದು ಸಂಭವಿಸಿದಾಗ ಆಂತರಿಕ ಅನುಭವದಲ್ಲಿ ದೋಷಗಳು ಒಳಗೆ ಬರಬಹುದು.

*

**ಅವರ ಪ್ರಭಾವವನ್ನು ಸ್ವೀಕರಿಸುವುದು**

ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸುವುದಕ್ಕಾಗಿ ನಂಬಿಕೆ, ಇಡಿಯಾದ ನಿಷ್ಕಾಪಟ್ಯ ಮತ್ತು ಅವರ ಪ್ರಭಾವಕ್ಕೆ ತೆರೆದಿರಿಸಿಟ್ಟುಕೊಳ್ಳುವುದಕ್ಕಾಗಿ ಸಂಕಲ್ಪ ಹಾಗೂ ಕ್ಷಮತೆ ಇವುಗಳ ಹೊರತಾಗಿ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಪ್ರಭಾವವನ್ನು ಸ್ವೀಕರಿಸುವುದಕ್ಕಾಗಿ ಬೇರೆ ಯಾವ ಷರತ್ತುಗಳು ಇರುವುದಿಲ್ಲ, ಆದರೆ ಸಾಮಾನ್ಯವಾಗಿ ಈ ಕ್ಷಮತೆ ನಿಷ್ಕಾಪಟ್ಯ ಹಾಗೂ ನಂಬಿಕೆ ಇವುಗಳಿಂದ ಬರುತ್ತದೆ.

ಆಶ್ರಮದ ಹೊರಗಿದ್ದವರೂ ಕೂಡ ಯೋಗವನ್ನು ಆಚರಿಸುವುದು ಸಾಧ್ಯವಾಗುತ್ತದೆ. ಭಾರತದ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಅದನ್ನು ಕೈಕೊಳ್ಳುವ ಅನೇಕ ಜನರಿದ್ದಾರೆ.

**CWSA, 32/106** **– ಶ್ರೀ ಅರವಿಂದರು**

*

**ಅವರ ಏಕತೆಯನ್ನು ಕುರಿತು ಅನುಭವಗಳು, ದರ್ಶನಗಳು ಹಾಗೂ ಕನಸುಗಳು**

ಶ್ರೀಮಾತೆಯವರು ಹಾಗೂ ನಾನು ಒಂದೇ ಸಾಮರ್ಥ್ಯಕ್ಕಾಗಿ ಎರಡು ರೂಪಗಳಲ್ಲಿ ನಿಂತಿದ್ದೇವೆ.– ಹಾಗಾಗಿ ಕನಸಿನಲ್ಲಿಯ ಗ್ರಹಿಕೆ ಪರಿಪೂರ್ಣವಾಗಿ ತರ್ಕಬದ್ಧವಾದದ್ದು. ಈಶ್ವರ–ಶಕ್ತಿ, ಪ್ರಕೃತಿ–ಪುರುಷ ಏಕೈಕ ಭಗವಂತನ ಎರಡು ಬದಿಗಳು ಮಾತ್ರವಾಗಿರುತ್ತವೆ.

**(ಬ್ರಹ್ಮನ್), 1933**

*

ಅದು ಬಹಳ ಸಾಮಾನ್ಯ ಅನುಭವ– ನಾನು ಮತ್ತು ಶ್ರೀಮಾತೆಯವರಲ್ಲಿರುವ ಅನ್ಯೋನ್ಯತೆ (ನಾವಿಬ್ಬರೂ ಏಕೈಕರಾಗಿರುವುದರ ಗ್ರಹಿಕೆ) ಅದು ಎರಡೂ

ಪ್ರತೀಕಗಳು ಒಂದು ಇನ್ನೊಂದರಲ್ಲಿ ಬೆಸುಗೆಗೊಂಡಿದ್ದ ಹಾಗಿದೆ.

**ನವ್ಹೆಂಬರ 4, 1935**


*

**ಪ್ರಶ್ನೆ :** *ನನಗೆ ಬಂದ ಅನುಭವದಲ್ಲಿ ಇದ್ದ ಹಾಗೆ ಶ್ರೀಮಾತೆಯವರು ಬಲಗಡೆ ನಿಂತಿರುವುದನ್ನು ಹಾಗೂ ನೀವು ಎಡಗಡೆ ನಿಂತಿರುವುದನ್ನು ಕುರಿತು ಏನಾದರೂ ಪ್ರಾಮುಖ್ಯತೆ ಇದೆಯೆ?*

**ಶ್ರೀ ಅ :** ಹೌದು, ಅವರದು ನಿರ್ವಾಹಕ ಸಾಮರ್ಥ್ಯ ಮತ್ತು ಅವರ ಬಲಗೈ ಕ್ರಿಯೆಗಾಗಿ ಮುಕ್ತವಾಗಿರಬೇಕು. ಅವರನ್ನು ಎಡಗಡೆ ನಿಲ್ಲಿಸುವ ಸಾಂಕೇತಿಕತೆ ಅವಿದ್ಯೆಗೆ ಸೇರಿದುದಾಗಿದೆ. ಅವಿದ್ಯೆಯಲ್ಲಿ ಅವರು ಎಡಗಡೆ ಇರುತ್ತಾರೆ, ಕ್ರಿಯೆಗಾಗಿ ಮುಕ್ತರಾಗಿರುವುದಿಲ್ಲ, ಎಲ್ಲವೂ ತಪ್ಪಾದ ಕ್ರಿಯೆಯಾಗಿರುತ್ತದೆ ಇಲ್ಲವೆ ಅರ್ಧ ಪರಿಣಾಮ ದೊರಕಿಸುತ್ತದೆ. ಅತಿಮಾನಸ ಕಾರ್ಯಕ್ಕಾಗಿ ನಿಜವಾದ ಸಂಕೇತ ಶ್ರೀಮಾತೆಯವರು ಬಲಗಡೆ ನಿಂತಿರುವುದಾಗಿದೆ.

**CWSA, 32/126** **– ಶ್ರೀ ಅರವಿಂದರು**

*



**ಶ್ರೀ ಅರವಿಂದರ ದೈವೀ ಶಕ್ತಿ**

ನಾನು ಕೇವಲ ಶ್ರೀ ಅರವಿಂದರ ಶಕ್ತಿಯಾಗಿದ್ದೇನೆ, ನನ್ನ ಎಲ್ಲ ಬಾಲಕ–ಬಾಲಕಿಯರ ಮಾತೆಯಾಗಿದ್ದೇನೆ.

ನನ್ನ ಎಲ್ಲ ಬಾಲಕ–ಬಾಲಿಕೆಯರು ಸಮನಾಗಿ ನನ್ನ ಪ್ರಜ್ಞೆಯ ಹಾಗೂ ನನ್ನ ಸತ್ತೆಯ ಭಾಗಗಳಾಗಿದ್ದಾರೆ. ಅವರು ಪರಿವರ್ತನೆ ಪಡೆದ ನಂತರ ಹಾಗೂ ಸಿದ್ಧಿಸಿಗೊಂಡ ನಂತರ ಎಲ್ಲರಿಗೂ ನನ್ನ ಹಾಗೂ ಶ್ರೀ ಅರವಿಂದರ ಒಂದು ಬದಿಯನ್ನು ಪ್ರಕಟಿಸಲು ಪ್ರತಿಯೊಬ್ಬನಿಗೂ ಎಂಬಂತೆ ಹಕ್ಕಿರುತ್ತದೆ.

ಸಾಮಾನ್ಯ ಪ್ರಕಟಣೆಯಲ್ಲಿರುವ ಒಗ್ಗಟ್ಟಿನಲ್ಲಿರುವ ಏಕತೆ ಪೃಥ್ವಿಯ ಮೇಲೆ ಹೊಸ ಹಾಗೂ ದೈವೀ ಜಗತ್ತನ್ನು ಸೃಷ್ಟಿಸಲು ಅನುವು ಮಾಡಿಕೊಡುತ್ತದೆ. ಪ್ರತಿಯೊಬ್ಬನೂ ತನ್ನ ಭಾಗವನ್ನು ತರುತ್ತಾನೆ. ಆದರೆ ಇಡಿಯಾದುದರಲ್ಲಿ ಒಗ್ಗಟ್ಟಿನಲ್ಲಿರುವ ಸಾಮರ್ಥ್ಯ ಎಂಬುದರ ಹೊರತಾಗಿ ಯಾವ ಭಾಗವೂ ಸಂಪೂರ್ಣವಾಗಿರುವುದಿಲ್ಲ.

**CWSA, 32/84** – ಶ್ರೀ ಅರವಿಂದರು

*

## ಶ್ರೀ ಅರವಿಂದರ ದೈವೀ ಶಕ್ತಿ

### ಸಮತೋಲನವನ್ನು ತರುವುದಕ್ಕಾಗಿ ಎರಡು ರೂಪಗಳಲ್ಲಿ ಒಂದೇ ದೈವೀ ಪ್ರಜ್ಞೆ

ಸಾರಭೂತವಾಗಿ ನಾವು ಏಕೈಕರಾಗಿದ್ದೇವೆ ಇಲ್ಲವೆ ಒಂದೇ ಆಗಿದ್ದೇವೆ, ಅದರಲ್ಲಿ ವ್ಯತ್ಯಾಸವೇನೂ ಇಲ್ಲ. ಪ್ರಕಟಣೆಯಲ್ಲಿ ಅದೇ ಪ್ರಜ್ಞೆ ಎರಡು ರೂಪಗಳಲ್ಲಿ ಒಂದು ಇನ್ನೊಂದಕ್ಕೆ ಆಧಾರ ನೀಡುವುದಕ್ಕಿದೆ. ಸೃಷ್ಟಿಯಲ್ಲಿಯ ಸಮತೋಲನಕ್ಕಾಗಿ ವಿಭಜನೆ ಅವಶ್ಯವಾಗಿದೆ, ಆದರೆ ಪ್ರಕಟಣೆಯಾಚೆಗೆ ವಿಭಜನೆ ಇಲ್ಲ, ಏಕತೆ ಪರಿಪೂರ್ಣವಾಗಿರುತ್ತದೆ. ಅದು ದೈವೀ ಏಕೈಕವಾದದ್ದು ಇಲ್ಲವೆ ದೈವೀ ಅನನ್ಯವಾದದ್ದು–ಏಕೈಕವಾದ ದೈವೀ ಪ್ರಜ್ಞೆ ಮತ್ತು ಕೆಲವೊಮ್ಮೆ ಐಕ್ಯತೆ ಅವಶ್ಯವಾದಾಗ ಅದನ್ನು ಪ್ರಕಟಣೆಯಲ್ಲಿ ಕೂಡ ಕಾಣಬಹುದು. ಮನುಷ್ಯ ತನ್ನನ್ನು ಈ ಪ್ರಜ್ಞೆಗೆ ತೆರೆದುಕೊಂಡಾಗ ಅವನು ಈ ಏಕತೆಯನ್ನು ನೋಡಬಲ್ಲನು. ವಾಸ್ತವದಲ್ಲಿ ಅದೇ ಆಗಿದೆ. ಅದೇನೆಂಬುದನ್ನು ವಿವರಿಸಿ ಹೇಳಲಾಗದು. ಅದನ್ನು ಕೇವಲ ಜೀವಿಸಬಹುದು. ಏಕಾಗ್ರತೆ ಕೈಕೊಳ್ಳುವುದರ ಮೂಲಕ ಮತ್ತು ಅದಕ್ಕೆ ತೆರೆದಿಟ್ಟುಕೊಳ್ಳುವುದರ ಮೂಲಕ ಮನುಷ್ಯ ಈ ಅನುಭವವನ್ನು ತಲುಪುತ್ತಾನೆ. ಅದು ಮನಸ್ಸಿನಿಂದ ರಚಿತವಾದ ಏನೋ ಒಂದಲ್ಲ. ಈ ಪ್ರಾಂತದಲ್ಲಿ ಮನಸ್ಸು ಪ್ರವೇಶಿಸಲಾರದು.

*

ನಿಜ ಹೇಳುವುದಾದರೆ ಶ್ರೀ ಅರವಿಂದರು ಹಾಗೂ ನಾನು ಒಂದೇ ಆಗಿದ್ದೇವೆ, ನಮ್ಮ ಪ್ರಜ್ಞೆ ಒಂದೇ ಆಗಿದೆ. ಇಲ್ಲಿ ಕೆಳಗೆ ವಿಭಜನೆಯಿದೆ, ಇದು ಕೇವಲ ಸೃಷ್ಟಿಯಲ್ಲಿ ಸಮತೋಲನ ತರುವುದಕ್ಕಾಗಿ ಇದೆ. ಹಾಗಿರದಿದ್ದರೆ ಅದು ಒಂದೇ ಆಗಿದೆ. ನಾವು ನಿಜವಾಗಿ ಏಕೈಕರಾಗಿದ್ದೇವೆ. ಇಲ್ಲ, ಅದನ್ನು ಅಭಿವ್ಯಕ್ತಗೊಳಿಸುವುದು ಕಠಿಣ. ನನಗೆ ಶಬ್ದಗಳು ಸಿಗುತ್ತಿಲ್ಲ. ಇಲ್ಲ, ಅದು ಸಾಧ್ಯವಿಲ್ಲ. ಅದನ್ನು ಅಭಿವ್ಯಕ್ತಗೊಳಿಸಲಾಗದು....

ಪ್ರಕಟಣೆಯಾಚೆಗೆ ಎಲ್ಲವೂ ದೈವೀ ಏಕೈಕವಾಗಿದೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಅಲ್ಲಿ ವ್ಯತ್ಯಾಸವಿಲ್ಲ. ಅದು ಅದೇ ವಿಷಯ, ಏಕೈಕ ಪ್ರಜ್ಞೆ, ಪರಿಪೂರ್ಣ ಏಕತೆ. ನಮಗೆ ಪ್ರತ್ಯೇಕ ಅಸ್ತಿತ್ವವಿಲ್ಲ. ಆದರೆ ನಾವು ಕೆಳಗೆ ಅವರೋಹಣ ಮಾಡಿ ಬಂದಾಗ, ನಮಗೆ ಭಿನ್ನ ರೂಪಗಳಿವೆ, ಪ್ರತ್ಯೇಕ ಅಸ್ತಿತ್ವವಿದೆ ಎಂದು ತೋರಿಬರುತ್ತದೆ, ಅದು ಹಾಗಿರುವಾಗ ಅವಶ್ಯವಾದಾಗೆಲ್ಲ ಏಕವಾಗಿ–ರುತ್ತೇವೆ. ಕೆಲವೊಮ್ಮೆ ಅವರು ನನ್ನೊಡನೆ ಏಕವಾಗಿರುತ್ತಾರೆ, ಅದೇ ವೇಳೆಗೆ ವಿಶ್ವದಲ್ಲೆಲ್ಲ ಇರುತ್ತಾರೆ. ಅವರು ಇಲ್ಲಿ ನನ್ನೊಳಗೆ ಇದ್ದಾರೆ, ನನ್ನೊಡನೆ ಮಾತನಾಡುತ್ತಾರೆ. ಅವರು ತಮ್ಮನ್ನು ನನ್ನೊಂದಿಗೆ ಏಕವಾಗಿಸಿಕೊಳ್ಳುತ್ತಾರೆ ಮತ್ತು ಕೆಲವೊಮ್ಮೆ ಅವರು ನನ್ನಿಂದ ಪ್ರತ್ಯೇಕವಾಗಿರುತ್ತಾರೆ ಮತ್ತು ನನ್ನಿಂದ ಪ್ರತ್ಯೇಕವಾದ ಅಸ್ತಿತ್ವದಲ್ಲಿ ಜೀವಿಸುತ್ತಾರೆ ಮತ್ತು ಅದೇ ವೇಳೆಗೆ ನನ್ನಲ್ಲಿರುತ್ತಾರೆ. ಆದರೆ ಅದು ತೋರಿಕೆಯಲ್ಲಿ, ಅವರು ನನ್ನಿಂದ ಭಿನ್ನರಾಗಿರುತ್ತಾರೆ. ಅದು ತೆರೆದುಕೊಳ್ಳುತ್ತಿರುವ ಲೀಲೆ: ಒಮ್ಮೆ ನನ್ನೊಡನೆ ಏಕಗೊಳ್ಳುತ್ತಾರೆ, ಮತ್ತೊಂದು ಸಮಯದಲ್ಲಿ ಅವರು ತಮ್ಮನ್ನು ಪ್ರಕಟಣೆಯಲ್ಲಿ ಚೆಲ್ಲಿಕೊಳ್ಳುತ್ತಾರೆ. ಅವರು ಇಲ್ಲಿ (ಶ್ರೀಮಾತೆಯವರು ತಮ್ಮ ದೇಹವನ್ನು ತೋರಿಸುತ್ತಾರೆ)ದ್ದಾರೆ. ಅವರು ಅಲ್ಲಿದ್ದಾರೆ, ವಿಶ್ವದಲ್ಲಿ ಎಲ್ಲೆಡೆಯಲ್ಲಿ ಇದ್ದಾರೆ. ಪ್ರಕಟಣೆಯಲ್ಲಿ ಕಂಡುಬರುವ ಪ್ರತಿಯೊಂದು ವಸ್ತುವಿನಲ್ಲಿದ್ದಾರೆ. ಕೆಲವೊಮ್ಮೆ ಅವರು ತಮ್ಮನ್ನು ಪ್ರಕಟಿಸುತ್ತಾರೆ ಮತ್ತು ಕೆಲವೊಮ್ಮೆ ಅಡಗಿಕೊಂಡು ಉಳಿದುಕೊಂಡಿರುತ್ತಾರೆ ಮತ್ತು ಮನುಷ್ಯ ಅವರನ್ನು ಮತ್ತೆ ಕಂಡುಕೊಳ್ಳಲಾಗು–ವುದಿಲ್ಲ ಮತ್ತು ಈ ರೀತಿಯಲ್ಲಿ ಸೃಷ್ಟಿಯನ್ನು ಅವರು ಪೋಷಿಸುತ್ತಾರೆ. ಒಮ್ಮೆ ತಮ್ಮನ್ನು ಏಕಗೊಳಿಸುತ್ತಾರೆ ಮತ್ತೊಂದು ಸಮಯದಲ್ಲಿ ಅವಶ್ಯವಾದಾಗ ತಮ್ಮನ್ನು ಪ್ರತ್ಯೇಕಗೊಳಿಸಿಕೊಳ್ಳುತ್ತಾರೆ. ಒಂದು ಇನ್ನೊಂದರೊಡನೆ ಸಂಮಿಶ್ರಗೊಂಡಿರುತ್ತದೆ, ಅದು ಒಂದು ಉದ್ದೇಶಕ್ಕಾಗಿ ಇರುತ್ತದೆ, ಗುರಿಯೊಂದನ್ನು ಮುಂದಿಟ್ಟುಕೊಂಡು ಅವರು ತಮ್ಮ ಕ್ರಿಯೆಗಳನ್ನು ನಿರ್ಧರಿಸುತ್ತಾರೆ. ಅವರು ಇಲ್ಲಿರುತ್ತಾರೆ ಮತ್ತು

ಮನುಷ್ಯನೊಬ್ಬ ಅವರನ್ನು ಏಕಕಾಲಕ್ಕೆ ಬೇರೆಯಡಿಯಲ್ಲಿ ನೋಡುತ್ತಾನೆ. ಅದನ್ನು ಅಭಿವ್ಯಕ್ತಗೊಳಿಸುವುದು ಕಠಿಣವಾದದ್ದು. ಇಲ್ಲ, ಅದಕ್ಕಾಗಿ ಶಬ್ದಗಳಿಲ್ಲ. ಅದು ಏನಿದೆ ಎಂಬುದನ್ನು ಮನುಷ್ಯ ಮನಸ್ಸಿನಿಂದ ತಿಳಿದುಕೊಳ್ಳಲಾರ.

*

## ಶ್ರೀ ಅರವಿಂದರು ಎಲ್ಲೆಡೆಯಲ್ಲಿದ್ದಾರೆ

ಅವರು ದೇಹತ್ಯಾಗ ಮಾಡಿದಾಗ . . . ತಮ್ಮ ದೇಹತ್ಯಾಗ ಮಾಡಬೇಕೆಂದು ಬಯಸಿದಾಗ ಡಿ.5 ರಿಂದ ಡಿ.9 ರವರೆಗೆ ಉಳಿದುಕೊಂಡಿದ್ದರು. ಆ ಸಮಯದಲ್ಲಿ ಕಲ್ಪನಾತೀತ ಪ್ರಜ್ಞೆಯಿಂದ ತುಂಬಿಕೊಂಡಿದ್ದರು. ಅದು ಕ್ರಿಯಾತ್ಮಕ ಚಟುವಟಿಕೆ–ಯಾಗಿತ್ತು, ಅವರ ದೇಹದಿಂದ ಹೊರಸೂಸುತ್ತಿತ್ತು. ಅದು ಎಷ್ಟೊಂದು ಮೂರ್ತ–ಸ್ವರೂಪದ್ದಾಗಿತ್ತೆಂದರೆ ಭೌತಿಕವಾಗಿ ಅವರಲ್ಲಿದ್ದ ಪ್ರತಿಯೊಂದೂ ಆಶ್ಚರ್ಯಕಾರಕ ಸಾಮರ್ಥ್ಯದಿಂದ ಕಂಪಿಸುತ್ತಿತ್ತು. ಅದು ಭೌತಿಕವಾಗಿ ಎಷ್ಟೊಂದು ಮೂರ್ತ ಸ್ವರೂಪದ್ದಾಗಿತ್ತು. ಆ ಸಮಯದಲ್ಲಿ ನಾನು ಶ್ರೀ ಅರವಿಂದರ ಸಮೀಪವಿದ್ದೆ ಮತ್ತು ಶ್ರೀ ಅರವಿಂದರ ಪ್ರಜ್ಞೆ ಅವರಿಂದ ಹೊರಬಂದು ನನ್ನಲ್ಲಿ ಭೌತಿಕವಾಗಿ ಹೀಗೆ ಪ್ರವೇಶಿಸುತ್ತಿತ್ತು. ಅದು ಅಸಾಧಾರಣ ಗೋಚರ ಸಂಗತಿಯಾಗಿತ್ತು. ಅವರ ಪ್ರಜ್ಞೆ ನನ್ನ ದೇಹದ ರಂಧ್ರಗಳಲ್ಲಿ ಘರ್ಷಣೆಯೊಂದಿಗೆ ಪ್ರವೇಶಿಸುತ್ತಿರುವುದರ ಭಾವನೆ ನನಗೆ ಬರುತ್ತಿತ್ತು. ಅದು ಅಷ್ಟು ಮೂರ್ತ ಸ್ವರೂಪದ್ದಾಗಿತ್ತು. ಅದು ಎಷ್ಟೊಂದು ಗಾಢವಾಗಿತ್ತೆಂದರೆ, ಘರ್ಷಣೆಯೊಂದಿಗೆ ನನ್ನೊಳಗೆ ಒಳನುಗ್ಗಿ ಬರುತ್ತಿತ್ತು, ಅದು ಪರಿಪೂರ್ಣವಾಗಿ ಭೌತಿಕವಾದದ್ದಾಗಿತ್ತು, ಅದರ ಅನುಭವವನ್ನು ನಾನು ಬಾಹ್ಯದಲ್ಲಿ ಪಡೆದೆ. ಹೀಗೆ ಅವರ ಎಲ್ಲ ಪ್ರಜ್ಞೆ ನನ್ನೊಳಗೆ ಪ್ರವೇಶ ಮಾಡಿತು, ಏಕೆಂದರೆ, ಅದು ಒಂದೇ ಪ್ರಜ್ಞೆ.

ಅವರು ದೇಹತ್ಯಾಗ ಮಾಡಿ ಹೋಗುವಾಗ ಪ್ರತಿಯೊಂದನ್ನೂ ನನಗೆ ನೀಡಿದರು, ಯಾವ ನಿರ್ಬಂಧವನ್ನು ಇರಿಸಿಕೊಳ್ಳದೆ ಮತ್ತು ಇಡಿಯಾದ ಸ್ವ–ಅರ್ಪಣೆ ಎಂಬಂತೆ ನೀಡಿದರು, ಅದು ಅವರ ಎಲ್ಲ ಪ್ರಜ್ಞೆ ನನ್ನಲ್ಲಿ ವಿಲೀನಗೊಂಡಂತಿತ್ತು. ಅದು ಗಂಟೆಗಳ ಕಾಲ ಮುಂದುವರಿದುಕೊಂಡು ಹೋಯಿತು. ಅಹಾ! ಅದು ಎಂತಹ ಭೌತಿಕ ಘಟನೆಯಾಗಿತ್ತೆಂದರೆ ಅದನ್ನು ಕಲ್ಪನೆ

ಮಾಡಿಕೊಳ್ಳಲೂ ಅಸಾಧ್ಯವಾಗಿತ್ತು. ಅವರು ನನಗಾಗಿ ಎಲ್ಲವನ್ನೂ ಬಿಟ್ಟುಕೊಟ್ಟು ಹೋದರು.

ಸರಿ, ಭೌತಿಕ ದೇಹ ಸೀಮಿತವಾಗಿದೆ, ಬಂಧನಕ್ಕೊಳಗಾಗಿದೆ ಮತ್ತು ಲೀಲೆಗೆ ಅವಕಾಶ ಮಾಡಿಕೊಡುವುದಿಲ್ಲ, ಒಮ್ಮೆ ಪ್ರಜ್ಞೆ ಈ ದೇಹದಲ್ಲಿ ಪ್ರವೇಶಿಸಿದಾಗ ಅದು ಸಂಪೂರ್ಣವಾಗಿ ಈ ಭೌತಿಕ ರೂಪದಲ್ಲಿ ತಡೆಗೊಳಗಾಗುತ್ತದೆ. ಆದರೆ ಅವರು ಎಲ್ಲೆಡೆಯಲ್ಲಿದ್ದಾರೆ. ಅವರು ಇಲ್ಲಿ ನನ್ನೊಳಗಿದ್ದಾರೆ, ಹಾಗೂ ವಿಶ್ವದಲ್ಲಿ ಎಲ್ಲೆಡೆಯಲ್ಲಿ ಇದ್ದಾರೆ. ಅವರು ನನ್ನ ಹತ್ತಿರ ಮಾತನಾಡುತ್ತಾರೆ, ನಾನು ವಿಷಯಗಳನ್ನು ಕುರಿತು ಅವರನ್ನು ಕೇಳುತ್ತೇನೆ ಮತ್ತು ಅವರು ಉತ್ತರ ನೀಡುತ್ತಾರೆ. ನಾವು ಮಾತುಕತೆ ನಡೆಸಿರುತ್ತೇವೆ ಮತ್ತು ಅದೇ ವೇಳೆಗೆ ಬೇರೆ ಸ್ಥಳಗಳಲ್ಲಿದ್ದ ಭಿನ್ನ ಜನರೊಂದಿಗೆ ಮಾತನಾಡುತ್ತಾರೆ. ನಾವು ಜಗತ್ತಿನ ವಿಧಿಯನ್ನು ಹಾಗೂ ಮನುಕುಲದ ಅದೃಷ್ಟವನ್ನು ನಿರ್ಧರಿಸುತ್ತೇವೆ ಮತ್ತೆ ಸಂಭವಿಸಲೇನಿದೆಯೆಂಬುದನ್ನು, ಮುಂದಿನ ಹಂತಕ್ಕೆ ಅವಶ್ಯವಾದದ್ದು ಏನು ಎಂಬುದೆಲ್ಲವನ್ನೂ ನಿರ್ಧರಿಸುತ್ತೇವೆ.

ಅವರ ಸಾನ್ನಿಧ್ಯ ಎಲ್ಲೆಡೆಯಲ್ಲಿದೆ, ಮನುಷ್ಯನಿಗೆ ಅವರ ಆವಶ್ಯಕತೆ ಉಂಟಾದಾಗೆಲ್ಲ ಅಲ್ಲಿ ಅವರಿರುತ್ತಾರೆ. ಅವರು ನನ್ನೊಂದಿಗೆ ಏಕವಾಗಿದ್ದಾರೆ ಮತ್ತು ಅದೇ ವೇಳೆಗೆ ಭಿನ್ನ ಸ್ಥಳಗಳಲ್ಲಿ ಇರುತ್ತಾರೆ. ಅವರು ಸೀಮಿತಗೊಂಡಿಲ್ಲ, ಕೇವಲ ಭೌತಿಕ ದೇಹ ಸೀಮಿತಗೊಂಡಿರುತ್ತದೆ, ಸೂಕ್ಷ್ಮಭೌತಿಕದಲ್ಲಿರುವ ದೇಹವಲ್ಲ. ಸೂಕ್ಷ್ಮಭೌತಿಕವಾದದ್ದು ಪ್ರತಿಯೊಂದರಲ್ಲೂ ಒಳನುಗ್ಗುತ್ತದೆ ಮತ್ತು ಎಲ್ಲಿ ಬೇಕಾದಲ್ಲಿ ಅದು ಹೋಗಬಲ್ಲದು. ಅದು ದೇಹದಿಂದ ಸೀಮಿತಗೊಂಡಿಲ್ಲ. ಈ ದೇಹ ಸೀಮಿತಗೊಳಿಸುತ್ತದೆ. ಮನಸ್ಸು ಗ್ರಹಿಸಲಾಗುವುದಿಲ್ಲ. ನೀವು ನಿಮ್ಮ ಮನಸ್ಸಿನೊಂದಿಗೆ ಇದನ್ನು ತಿಳಿದುಕೊಳ್ಳಲಾರಿರಿ. ಮನಸ್ಸು ಅದನ್ನು ಅಭಿವ್ಯಕ್ತಗೊಳಿಸಲಾರದು, ಅಭಿವ್ಯಕ್ತಗೊಳಿಸಲು ಅದರ ಬಳಿ ಸಾಧನವಿಲ್ಲ. . . . ನನ್ನ ಮಗು, ಕೇವಲ ಸರಿಸಮಾನರಾದವರು ಸರಿಸಮಾನರಾದವರನ್ನು ಅರಿತುಕೊಳ್ಳುತ್ತಾರೆ, ಹಾಗಾಗಿ ಅದೇನೆಂಬುದನ್ನು ತಿಳಿದುಕೊಳ್ಳಲು ಮನುಷ್ಯ ಆ ಪ್ರಜ್ಞೆಯತ್ತ ಏರಿ ಹೋಗಬೇಕು, ದೈವೀ ಏಕೈಕನಾದವನೊಂದಿಗೆ ತದ್ವತ್ತಾದ ಪ್ರಜ್ಞೆಯ ಅನುಭವ ಪಡೆಯುವುದು ಆಗ ಸಾಧ್ಯವಾಗುವುದು.

ಹೌದು, ಅದು ಯಾವಾಗಲೂ ಅದರ ಹಾಗಿದೆ. ಸತತವಾಗಿ ಅಲ್ಲಿ ಸಂಪೂರ್ಣ ಏಕತೆ ಇರುತ್ತದೆ ಮತ್ತು ಬಾಹ್ಯದತ್ತ ಚಲನೆಯೊಂದಿರುತ್ತದೆ. ಇದು ಎಲ್ಲೆಡೆಗೆ ಒಂದೇ ವೇಳೆಗೆ ಇರುತ್ತದೆ. ಇದು ಸತತ ಸಂಭವಿಸುತ್ತಿರುತ್ತದೆ, ಈ ಏಕತೆ ಮತ್ತು ಈ ಬಗೆಯಲ್ಲಿ ಕವಲೊಡೆಯುವುದು ಎಲ್ಲೆಡೆಯಲ್ಲೂ ಇರುತ್ತದೆ. ಅದು ಸತ್ಯವಾದದ್ದು, ಅದು ನಿರಂತರವಾಗಿ ಸಂಭವಿಸುತ್ತಿರುತ್ತದೆ, ದರ್ಶನವಿದ್ದವರಿಗೆ ಕಂಡುಬರುವುದು ಇದೇ ಆಗಿರುತ್ತದೆ. ಅದು ಚೈತ್ಯಾತ್ಮಿಕ ದರ್ಶನ.

*

**ಆ ಕಾರ್ಯ ಒಂದೇ ಆಗಿರುತ್ತದೆ**

**ಪ್ರಶ್ನೆ :** *ಶ್ರೀಮಾತೆಯವರೆ, ಶ್ರೀ ಅರವಿಂದರ ಪರಿಚಯ ನಿಮಗೆ ಆಗುವುದಕ್ಕಿಂತ ಮೊದಲು ಅವರೊಡನೆ ಪರಸ್ಪರ ಸಂಪರ್ಕ ಏನಾದರೂ ಉಂಟಾಗಿತ್ತೆ? ಏಕೆಂದರೆ ನಾನು ಓದಿದ ಪುಸ್ತಕಗಳಲ್ಲಿ ಅವರು ಹಾಗೂ ನೀವು ಒಂದೇ ಕಾರ್ಯಕೈಕೊಳ್ಳು–ತ್ತಿದ್ದೀರಿ ಎಂದು ಹೇಳಲಾಗಿತ್ತು.*

**ಶ್ರೀಮಾತೆ :** ಆ ಕಾರ್ಯ ಒಂದೇ ಆಗಿತ್ತು ಮತ್ತು ಒಂದೇ ಆಗಿದೆ, ಏಕೆಂದರೆ ಅವರಿಗಿದ್ದ ಸ್ಫೂರ್ತಿಯ ಮೂಲ ಹಾಗೂ ನನಗಿದ್ದುದರ ಸ್ಫೂರ್ತಿಯ ಮೂಲ ಒಂದೇ ಆಗಿದೆ.

**Blessings of the Grace, pp. 98-102, Dec.10, 1967**

*

(ಶ್ರೀಮಾತೆಯವರ ಇನ್ನೊಂದು ಪತ್ರದಿಂದ)

ಆ ಕಾರ್ಯ ಇಡೀ ಮನುಕುಲಕ್ಕೆ ಸಹಾಯ ಮಾಡುವುದಾಗಿದೆ, ಅದು ತನ್ನನ್ನು ಹೊಸ ಸೃಷ್ಟಿಗಾಗಿ ಎಂದರೆ ಅತಿಮಾನಸ ಕುಲದ ಸೃಷ್ಟಿಗಾಗಿ ತಯಾರು ಮಾಡಿಕೊಳ್ಳುವುದಕ್ಕಾಗಿ ಇದೆ.

**ಮೇ 19, 1968** **– ಶ್ರೀಮಾತೆ**

*

**ಪ್ರಶ್ನೆ :** *ಶ್ರೀಮಾತೆಯವರೆ, ಈ ಪುಸ್ತಕದಲ್ಲಿರುವ ಕೊನೆಯ ವಾಕ್ಯ ಸ್ವಾರಸ್ಯಕರವಾಗಿದೆ ಹಾಗೂ ಹೃದಯಸ್ಪರ್ಶಿಯಾಗಿದೆ:* "ಅವರಿಲ್ಲದೆ ನೀವು ಅಸ್ತಿತ್ವದಲ್ಲಿರುವುದಿಲ್ಲ ಮತ್ತು

ನೀವಿಲ್ಲದೆ ಅವರು ತಮ್ಮನ್ನು ಪ್ರಕಟಗೊಳಿಸಲಾರರು."

**ಶ್ರೀಮಾತೆ :** ಅದು ಪರಿಪೂರ್ಣ ಸತ್ಯ ಎಂಬುದನ್ನು ನೀನು ತಿಳಿದುಕೊಳ್ಳಬೇಕು. ನಾನು ಆ ಪುಸ್ತಕದಲ್ಲಿ ನಿಖರವಾಗಿ ಏನು ಹೇಳಿರುವೆ ಎಂಬುದು ನನಗೆ ತಿಳಿದಿಲ್ಲ, ಆದರೆ ಅವರಿಲ್ಲದೆ ನಾನು ಅಸ್ತಿತ್ವದಲ್ಲಿರಲಾರೆ ಮತ್ತು ನಾನಿಲ್ಲದೆ ಅವರು ಪ್ರಕಟಗೊಳ್ಳಲಾರರು. ಆದರೆ ನಿಜವಾಗಿ ನಾವಿಬ್ಬರೂ ಒಂದೇ ಆಗಿದ್ದೇವೆ. ಅದು ಅದೇ ವಿಷಯ, ಅದೇ ಅಸ್ತಿತ್ವ, ಪ್ರಕಟಣೆಯಲ್ಲಿ ಸೃಷ್ಟಿಯನ್ನು ಮೇಲಕ್ಕೆತ್ತಿ ಹಿಡಿಯುವುದಕ್ಕಾಗಿ ಎರಡು ಪ್ರತ್ಯೇಕ ರೂಪಗಳನ್ನು ತೆಗೆದುಕೊಳ್ಳುತ್ತದೆ. ಅದಿಲ್ಲ–ದಿದ್ದರೆ ಅದು ನಾನು ಮತ್ತು ಅವರು ಎಂಬುದಷ್ಟೇ ಆಗಿರುತ್ತದೆ. ಅಲ್ಲಿ ಭಿನ್ನತೆ ಇಲ್ಲ, ಪ್ರತ್ಯೇಕತೆ ಇಲ್ಲ, ದೈವೀ ಏಕ್ಯೈಕವಾದದ್ದು, ಅನನ್ಯವಾದದ್ದು ಹಾಗೂ ಒಂದೇ ಆಗಿರುವಂತಹದು. ಅವರೇನಿರುವರೋ, ನಾನು ಸಾರದಲ್ಲಿ ಅದಾಗಿದ್ದೇನೆ. (ಶ್ರೀಮಾತೆಯವರು ತಮ್ಮ ಎರಡೂ ಕೈಗಳ ಬೆರಳುಗಳನ್ನು ತಳುಕು ಹಾಕಿ ತೋರಿಸುತ್ತಾರೆ.) ನಾವು ಏಕಗೊಂಡಿದ್ದೇವೆ, ಒಂದೇ ಆಗಿದ್ದೇವೆ ಮತ್ತು ತದ್ವತ್ತಾಗಿದ್ದೇವೆ, ವಿಭಜನೆ ಇಲ್ಲದೆ ಏಕ್ಯೈಕರಾಗಿದ್ದೇವೆ. ಆದರೆ ಪ್ರಕಟಣೆಯಲ್ಲಿ ದೈವೀ ಏಕ್ಯೈಕವಾದುದು ತನ್ನನ್ನು ವಿಭಜನೆಗೆ ಒಳಪಡಿಸುತ್ತದೆಂದು ತೋರಿಬರುತ್ತದೆ; (ಶ್ರೀಮಾತೆಯವರು ಬೆರಳುಗಳನ್ನು ಪ್ರತ್ಯೇಕವಾಗಿ ಇರಿಸುತ್ತಾರೆ) ಎರಡು ಪ್ರಕಟಣೆಗಳಲ್ಲಿ–ರುತ್ತದೆ. ಆದರೆ ಕೇವಲ ತೋರಿಕೆಯಲ್ಲಿ ಏಕ್ಯೈಕವಾದುದು ಪ್ರಕಟಣೆಯನ್ನು ಮೇಲಕ್ಕೆತ್ತಿ ಹಿಡಿಯುವುದಕ್ಕಾಗಿ ವಿಭಜನೆಗೊಳ್ಳುತ್ತದೆ. ವಾಸ್ತವದಲ್ಲಿ ಅದು ಏಕವಾಗಿದೆ, ಏಕ್ಯೈಕವಾದ ಅದು ನಾನು ಹಾಗೂ ಅವರು ಎಂಬ ಎರಡು ದೇಹಗಳನ್ನು ಧಾರಣ ಮಾಡುತ್ತದೆ. ನೈಜತೆಯಲ್ಲಿ ಈ ಎರಡೂ ಅಸ್ತಿತ್ವಗಳು ಒಂದೇ ಆಗಿವೆ, ಅನನ್ಯವಾಗಿವೆ. ಈ ರೀತಿಯಲ್ಲಿ ದೈವೀ ಏಕ್ಯೈಕವಾದದ್ದು ಪ್ರಕಟಣೆಯಲ್ಲಿ ಇರುವುದು ತೋರಿಬರುತ್ತದೆ. ಆದರೆ ಅವರೇನಾಗಿರುವರೋ ಅದು ನಾನಾಗಿದ್ದೇನೆ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ಅದು ತೋರಿಕೆಗೆ ಪ್ರಕಟಣೆಯಲ್ಲಿ ತೋರಿಬರುವ ವ್ಯತ್ಯಾಸ. ನಮಗೆ ಎರಡು ಭಿನ್ನ ದೇಹಗಳಿವೆ, ಆದರೆ ನಾವು ಇಬ್ಬರಲ್ಲಿ ಒಬ್ಬರಾಗಿದ್ದೇವೆ. (ಶ್ರೀಮಾತೆಯವರು ಅದೇ ಸಂಜ್ಞೆಯನ್ನು ಮಾಡಿ ತೋರಿಸುತ್ತಾರೆ.) ಅದರಾಚೆಗೆ ಅಲ್ಲಿ ಇನ್ನೂ ಏನೋ ಒಂದಿದೆ – ಅದು ಆಚೆಗೆ ನಾವು ನೈಜತೆಯಲ್ಲಿ ಏನಾಗಿದ್ದೇವೆ ಎಂಬುದಿದೆ. ಆದರೆ ಅದನ್ನು ಕುರಿತು ಮಾತನಾಡಲಾಗದು. ಅದೇನಿದೆ ಎಂಬುದನ್ನು ಶಬ್ದಗಳಲ್ಲಿ ಹೇಳಲಾಗುವುದಿಲ್ಲ. ಆ ತತ್‌ನ್ನು ಕುರಿತು ಮನುಷ್ಯ

ಹೇಳುವುದೆಲ್ಲ ಹೆಡ್ಡತನದ್ದಾಗಿರುತ್ತದೆ. ಆ ಅಸ್ತಿತ್ವ ಕುರಿತು ಶಬ್ದಗಳು ಏನನ್ನೂ ಅಭಿವ್ಯಕ್ತಪಡಿಸಲಾರವು. ಏನೂ ಇಲ್ಲ, ಅದನ್ನು ಕುರಿತು ಮಾತನಾಡಬಾರದು. ಪರಮೋಚ್ಚನು ತನ್ನನ್ನು ಎರಡು ರೂಪಗಳಲ್ಲಿ ಪ್ರಕಟಪಡಿಸುತ್ತಾನೆ.

**Blessings of the Grace, pp. 104–05** **– ಶ್ರೀಮಾತೆ**

*

ನಾನು ಪರಿಪೂರ್ಣವಾಗಿ ನಿಶ್ಚಿತತೆ ಹೊಂದಿರುವ ವಿಷಯ ಅಲ್ಲಿದೆ. ಅದು ನಾನು ಯಾರೆಂಬುದನ್ನು ಕುರಿತಾಗಿದೆ. ಶ್ರೀ ಅರವಿಂದರಿಗೆ ಆ ವಿಷಯ ತಿಳಿದಿತ್ತು ಮತ್ತು ಅವರು ಅದನ್ನು ಸಾರಿ ಹೇಳಿದರು. ಎಲ್ಲ ಮನುಕುಲದ ಸಂಶಯಗಳೂ ಕೂಡ ಈ ವಾಸ್ತವತೆಯನ್ನು ಬದಲು ಮಾಡಲಾರವು.

ಆದರೆ ಇನ್ನೊಂದು ವಿಷಯದ ಬಗ್ಗೆ ನಾನು ಅಷ್ಟೊಂದು ನಿಶ್ಚಿತತೆ ಹೊಂದಿಲ್ಲ. – ನಾನಿಲ್ಲಿ ದೇಹವೊಂದರಲ್ಲಿ ಇದ್ದುದರ, ನಾನು ಕೈಕೊಳ್ಳುತ್ತಿರುವ ಕಾರ್ಯದ ಹಾಗೂ ಕೈಕೊಂಡುದುದರ ಉಪಯುಕ್ತತೆ ಕುರಿತು ಆ ವಿಷಯವಿದೆ. ನಾನು ಆ ಕಾರ್ಯವನ್ನು ನನ್ನ ವೈಯಕ್ತಿಕ ಒತ್ತಡದಿಂದ ಕೈಕೊಳ್ಳುತ್ತಿಲ್ಲ. ಶ್ರೀ ಅರವಿಂದರು ಅದನ್ನು ಕೈಕೊಳ್ಳೆಂದು ಹೇಳಿದರು, ಆ ಕಾರಣದಿಂದಾಗಿ ನಾನದನ್ನು ಕೈಕೊಳ್ಳುತ್ತಿದ್ದೇನೆ. ಅದು ಪರಮೋಚ್ಚನ ಆದೇಶವಾದ್ದರಿಂದ ಪವಿತ್ರ ಕರ್ತವ್ಯವೆಂದು ಭಾವಿಸಿ ಅದಕ್ಕೆ ವಿಧೇಯವಾಗಿ ಕಾರ್ಯ ಕೈಕೊಳ್ಳುತ್ತಿದ್ದೇನೆ.

ಅದರಿಂದ ಪೃಥ್ವಿ ಎಷ್ಟರಮಟ್ಟಿಗೆ ಉಪಕೃತವಾಯಿತೆಂಬುದನ್ನು ಕಾಲಗತಿ ತೆರೆದು ತೋರಿಸುವುದು.

**CWM, 13/47** **– ಶ್ರೀಮಾತೆ**

*

**ಮಾ – ಶ್ರೀ ಅರವಿಂದೋ, ಮಾ – ಶ್ರೀ ಅರವಿಂದೋ**

**ಪ್ರಶ್ನೆ :** *ಶ್ರೀಮಾತೆಯವರೆ, ನೀವು ನಮ್ಮೊಳಗಿದ್ದೀರಿ ಎಂಬುದನ್ನು ಶ್ರೀ ಅರವಿಂದರು ಯಾವಾಗಲೂ ಹೇಳುತ್ತಿದ್ದರು.*

**ಶ್ರೀಮಾತೆ :** ಹೌದು, ಅದು ಸತ್ಯವಾದದ್ದು, ಪರಿಪೂರ್ಣವಾಗಿ ಸರಿಯಾದದ್ದು.

ನಾನು ಸನಾತನ ದೈವೀ ಜ್ವಾಲೆಯಲ್ಲಿ ಒಂದು ಸಾನ್ನಿಧ್ಯದ ರೂಪದಲ್ಲಿದ್ದೇನೆ. ಕ್ರಿಯೆಗೆ ಚೈತನ್ಯ ತುಂಬುವ ಹಾಗೂ ಅದನ್ನು ಪ್ರಾರಂಭಿಸುವ ದೈವೀ ಸಾಮರ್ಥ್ಯ–ವಾಗಿದ್ದೇನೆ. ಎಲ್ಲವನ್ನೂ ಶಾಂತಿಯುತವಾದದ್ದನ್ನಾಗಿ, ಮಧುರವಾದದ್ದನ್ನಾಗಿ ಅರ್ಪಿಸುವ ದೈವೀ ಶಾಂತಿಯಾಗಿದ್ದೇನೆ, ತುಂಬಿ ಹರಿಯುವ ಹಾಗೂ ಘನತೆಗೇರಿಸುವ ದೈವೀ ಸಂತೋಷವಾಗಿದ್ದೇನೆ, ಪರಿಶುದ್ಧಗೊಳಿಸುವ ದೈವೀ ಪ್ರಕಾಶವಾಗಿದ್ದೇನೆ ಮತ್ತು ಅನುಮತಿ ನೀಡುವ ದೈವೀ ಕಂಪನವಾಗಿದ್ದೇನೆ.

ಅಲ್ಲಿ ಶ್ರೀ ಅರವಿಂದರು ಪೋಷಿಸುವ ಅಸ್ತಿತ್ವದ ಹಾಗಿದ್ದಾರೆ, ನಾನು ಒಬ್ಬ ಮಾರ್ಗದರ್ಶಿಯ ಹಾಗಿದ್ದೇನೆ. ವಾಸ್ತವದಲ್ಲಿ ಅದು ಇಬ್ಬರಲ್ಲೂ ಇರುವ ತದ್ವತ್ತತೆ. ಒಬ್ಬರು ಅವಲೋಕನ ಮಾಡುತ್ತಾರೆ– ದೈವೀ ಸಾಕ್ಷೀಪುರುಷ, ಇನ್ನೊಂದು ಪರಿಣಾಮಕಾರಿಯಾಗಿಸುವ ದೈವೀ ಶಕ್ತಿ.

ಎಲ್ಲಿಯವರೆಗೆ ಮನುಷ್ಯ ಅದನ್ನು ಅರಿವಿಗೆ ತಂದುಕೊಂಡಿರುವುದಿಲ್ಲವೋ ಅವನು ಏನನ್ನೂ ತಿಳಿದುಕೊಳ್ಳಲಾರ. ಅದೇನೇ ಇರಲಿ, ನಿನ್ನ ಕೃತಜ್ಞತೆಯನ್ನು ಸರಿಯಾಗಿ ಸ್ವೀಕರಿಸಲಾಗಿದೆ. ಅವರು ನಿನ್ನ ಪ್ರಾರ್ಥನೆಯನ್ನು ಕೇಳಿದ್ದಾರೆ ಮತ್ತು ನಾನು ಆಶೀರ್ವಾದಗಳನ್ನು ನೀಡುತ್ತೇನೆ.

ಹೌದು ನನ್ನ ಮಗು, ಯಾರು ಶ್ರೀ ಅರವಿಂದರನ್ನು ಹಾಗೂ ನನ್ನನ್ನು ಗುರುತಿಸುತ್ತಾರೋ– ವಾಸ್ತವದಲ್ಲಿ ಅದು ಒಂದೇ ವಿಷಯ, ಅದೇ ತದ್ವತ್ತತೆ – ಅವನಿಗಾಗಿ ಈ ಜನ್ಮದಲ್ಲಿ ಮೃತ್ಯುವಿನ ನಂತರ ಮತ್ತು ಬರಲಿರುವ ಎಲ್ಲ ಜನ್ಮಗಳಲ್ಲಿ, ಶಾಶ್ವತ ಕಾಲದವರೆಗೆ ಎಲ್ಲ ಅಡೆತಡೆಗಳನ್ನು, ಎಲ್ಲ ತೊಂದರೆಗಳನ್ನು, ಎಲ್ಲ ಬಲೆಗಳನ್ನು, ದೈವೀ ಸತ್ಯದತ್ತ ಮುನ್ನಡೆಯುತ್ತಿರುವಾಗ ಕಾರ್ಯಭಂಗಗಳು ಎನ್ನುವ ಎಲ್ಲವನ್ನೂ ಗುಡಿಸಿಕೊಂಡು ಹೋಗಲಾಗುವುದು, ಅವುಗಳನ್ನು ಎಲ್ಲ ಕಾಲಕ್ಕೂ ತೆಗೆದು ಹಾಕಲಾಗಿರುತ್ತದೆ.

ಹೌದು, ಅವನಿಗಾಗಿ ದೈವೀ ಪ್ರಭು ಸರ್ವ ಸಾಮರ್ಥ್ಯವುಳ್ಳವನಾಗಿರುತ್ತಾನೆ. ಮಾ– ಶ್ರೀ ಅರವಿಂದೋ, ಮಾ– ಶ್ರೀ ಅರವಿಂದೋ ಎಂಬುದನ್ನು ಪುನರಾವರ್ತಿಸುತ್ತ ಹೇಳುತ್ತಿರಬೇಕು. (ಸಮಾಧಿ ಸ್ಥಿತಿ) ಅದು ಸಾಕಾಗುತ್ತದೆ. (ಸಮಾಧಿ ಸ್ಥಿತಿ)

**The Supreme, p. 63** **– ಶ್ರೀಮಾತೆ**

*

**ನಾನು ಕಾರ್ಯಕೈಕೊಳ್ಳಲಿಕ್ಕಾಗಿ ಉಳಿದುಕೊಂಡೆ**

ಮೇಲಿದ್ದುಕೊಂಡು ಕಾರ್ಯಕೈಕೊಳ್ಳುತ್ತ ಮನುಷ್ಯ ಈ ವಿಷಯಗಳನ್ನು ನಿಯಂತ್ರಿಸಬಹುದು, ಅವುಗಳನ್ನು ಅವುಗಳ ಸ್ಥಾನದಲ್ಲಿ ಹಿಡಿದಿಡಬಹುದು, ಯಾವುದೇ ಬಗೆಯ ಅಸಂತೋಷಕರ ಪ್ರಾರಂಭಿಸುವಿಕೆಗಳ್ನು ತಡೆಯಬಹುದು, ಆದರೆ ಅದಲ್ಲ, ಪರಿವರ್ತನೆ ಪರಿವರ್ತನೆಯೇ ಆಗಿರುತ್ತದೆ.

ಪ್ರಭುತ್ವವನ್ನೂ ಕೂಡ ಸಿದ್ಧಿಸಿಕೊಳ್ಳಬಹುದು– ಮೇಲಿದ್ದುಕೊಂಡು ಅದನ್ನು ಸುಲಭವಾಗಿ ಕೈಕೊಳ್ಳಬಹುದು, ಆದರೆ ಪರಿವರ್ತನೆಗಾಗಿ ಅವರೋಹಣ ಮಾಡಲೇಬೇಕಾಗುತ್ತದೆ, ಅದು ಭಯಾನಕವಾದದ್ದು, ಹಾಗೆ ಮಾಡದಿದ್ದರೆ ಅವಚೇತನ ಪರಿವರ್ತನೆಗೊಳಗಾಗದೆ ಎಂದೆಂದಿಗೂ ಅದಿದ್ದ ಹಾಗೆಯೇ ಉಳಿದುಕೊಳ್ಳುತ್ತದೆ.

ಕಾರ್ಯಕೈಕೊಳ್ಳುವುದರ ಅನಿವಾರ್ಯತೆ ಇಲ್ಲದಿದ್ದರೆ ನಾನು ಶ್ರೀ ಅರವಿಂದರ ಜೊತೆಗೆ ದೇಹತ್ಯಾಗ ಮಾಡಿಬಿಡುತ್ತಿದ್ದೆ, ಇದನ್ನು ನೀವು ತಿಳಿದುಕೊಳ್ಳಬೇಕು. ನಾನು ಕಾರ್ಯಕೈಕೊಳ್ಳುವುದಕ್ಕಾಗಿ ಮಾತ್ರವೆಂದು ಉಳಿದುಕೊಂಡೆ – ಕೈಕೊಳ್ಳಲೆಂದು ಅದು ಅಲ್ಲಿತ್ತು ಮತ್ತು ಅವರು ಅದನ್ನು ಕೈಕೊಳ್ಳಬೇಕೆಂದು ನನಗೆ ಹೇಳಿದ್ದರು, ಹಾಗಾಗಿ ನಾನದನ್ನು ಕೈಕೊಳ್ಳುತ್ತಿದ್ದೇನೆ. ಹಾಗಿರದಿದ್ದರೆ ಮನುಷ್ಯ ಪರಿಪೂರ್ಣವಾಗಿ ಪ್ರಜ್ಞೆಯುಳ್ಳವನಾಗಿದ್ದರೆ ಅವನು ಅತಿ ಕಡಿಮೆ ಸೀಮಿತತೆಗೆ ಒಳಗಾಗಿರುತ್ತಾನೆ, ಅವನಿಗೆ ದೇಹವಿರದೆ ಇರಬಹುದು. ಅಂತಹ ಮನುಷ್ಯ, ಸದ್ಯ ಶ್ರೀ ಅರವಿಂದರು ಕೈಕೊಳ್ಳುತ್ತಿರುವಂತೆ, ನೂರು ಜನರನ್ನು ನೂರು ಭಿನ್ನ ಸ್ಥಳಗಳಲ್ಲಿ ಒಂದೇ ವೇಳೆಗೆ ನೋಡಬಲ್ಲನು.

**ಅನುಯಾಯಿಯೊಂದಿಗೆ ಮಾತುಕತೆ: ಫೆಬ್ರವರಿ 18, 1961 – ಶ್ರೀಮಾತೆ**

*

**ಶ್ರೀ ಅರವಿಂದರೊಡನೆ ಏಕಗೊಳ್ಳಲು ಅರಸುತ್ತಿರುವ ಜೀವಕೋಶಗಳ ಸಂತೋಷ**

ಕೆಲವು ತಿಂಗಳುಗಳ ಹಿಂದೆ ಈ ದೇಹ ಮತ್ತೊಮ್ಮೆ ರಣಾಂಗಣವಾದಾಗ ಮತ್ತು ಎಲ್ಲ ಅಡೆತಡೆಗಳನ್ನು ಎದುರಿಸುತ್ತಿರುವಾಗ, ಅನಿಶ್ಚಿತ ಸ್ಥಿತಿಯಲ್ಲಿದ್ದಾಗ, ತನ್ನನ್ನು ತಾನೇ ಕೇಳಿಕೊಳ್ಳುತ್ತಿತ್ತು. ... ಅದು ಬೌದ್ಧಿಕವಾಗಿ ಆಶ್ಚರ್ಯಪಡುತ್ತಿರಲಿಲ್ಲ,

ಆದರೆ ಏನನ್ನೋ ಸ್ಪರ್ಶಿಸುವುದಕ್ಕಾಗಿ ಒಂದು ಬಗೆಯ ಗ್ರಹಿಕೆಗಾಗಿ ಕೇಳುತ್ತಿತ್ತು: ತಾನು ಯಾವ ದಿಶೆಯಲ್ಲಿ ಸಾಗುತ್ತಿದ್ದೇನೆ, ಯಾವ ರೀತಿಯಲ್ಲಿ ವಿಷಯಗಳು ಬಾಗಿ ಹೋಗಲಿವೆ ಎಂದು, ಮತ್ತು ಹಠಾತ್ತನೆ ಎಲ್ಲ ಜೀವಕೋಶಗಳಲ್ಲಿ ಈ ಬಗೆಯ ಭಾವನೆಯಿತ್ತು (ಅದು ಎಲ್ಲಿಂದ ಬಂದಿತು ಎಂಬುದು ನನಗೆ ತಿಳಿದಿದೆ): "ಈ ಸಂಮಿಶ್ರಣದಿಂದ, ಸಂಯೋಜನೆಯಿಂದ ವಿಘಟನೆ ಹೊಂದಿದರೆ ಮತ್ತು ಮೊದಲಿನ ಹಾಗೆ ಸಾಗಿ ಹೋಗಲಾಗದಿದ್ದರೆ ಆಗ ನಾವು ಬಾಣದ ಹಾಗೆ ನೇರವಾಗಿ ಶ್ರೀ ಅರವಿಂದರನ್ನು ಅತಿಮಾನಸ ಜಗತ್ತಿನಲ್ಲಿ ಮರಳಿ ಕೂಡಿಕೊಳ್ಳಲು ಹೋಗುತ್ತೇವೆ, ಆ ಜಗತ್ತು ನಮ್ಮ ಬಾಗಿಲ ಬಳಿ ಇದೆ." ಮತ್ತು ಅಲ್ಲಿ ಎಂತಹ ಸಂತೋಷವಿತ್ತು! ಎಂತಹ ಉತ್ಸಾಹ, ಎಂತಹ ಸಂತೋಷ ಜೀವಕೋಶಗಳಲ್ಲಿ ಪ್ರವಾಹ ರೂಪದಲ್ಲಿ ಬಂದಿತು. ಅವು ಪ್ರತ್ಯೇಕಗೊಳ್ಳುತ್ತೇವೇನೋ ಎಂಬುದನ್ನು ಕುರಿತು ಚಿಂತಿಸಲಿಲ್ಲ. "ಓಹ್, ಹಾಗಾದರೇನಾಗುವುದಿದೆ" ಎಂಬ ಭಾವನೆ ತಂದುಕೊಂಡವು.

ಇದು ನಿಜವಾಗಿ ದೇಹವನ್ನು ಪ್ರಕಾಶಿತಗೊಳಿಸುವ ಕಾರ್ಯದಲ್ಲಿ ಒಂದು ನಿರ್ಧಾರಕ ಹಂತವಾಗಿತ್ತು.

ಅವುಗಳನ್ನು ವಿಘಟನೆಗೊಳಪಡಿಸಲು ಪ್ರಯತ್ನ ಪಡುವ, ಮೃತ್ಯುವೆಂದು ಕರೆಯಲಾದ ಆ ಹೆಡ್ಡತನದ ಶಕ್ತಿಗಿಂತ ಆ ಎಲ್ಲ ಜೀವಕೋಶಗಳು ಹೆಚ್ಚು ಸಾಮರ್ಥ್ಯಪೂರ್ಣವಾಗಿರುವ ಭಾವನೆ ತಂದುಕೊಂಡವು. ಮೃತ್ಯುವನ್ನು ಕುರಿತು ಉದಾಸೀನ ಭಾವನೆ ತಂದುಕೊಂಡವು. "ನಾವು ಕಾಳಜಿ ಮಾಡುವದೇನಿದೆ? ನಾವು ಅಲ್ಲಿಗೆ ಹೋಗಿ ಪ್ರಜ್ಞಾಪೂರ್ವಕವಾಗಿ ಶ್ರೀ ಅರವಿಂದರ ಕಾರ್ಯದಲ್ಲಿ, ಎಂದರೆ ಜಗತ್ತನ್ನು ಪರಿವರ್ತನೆಗೊಳಪಡಿಸುವ ಕಾರ್ಯದಲ್ಲಿ ಒಂದಿಲ್ಲೊಂದು ರೀತಿಯಿಂದ ಭಾಗಿಯಾಗುತ್ತೇವೆ – ಇಲ್ಲಿ, ಅಲ್ಲಿ ಈ ರೀತಿಯಲ್ಲಿ, ಆ ರೀತಿಯಲ್ಲಿ – ಅದರಿಂದಾಗುವುದೇನಿದೆ?

ಮತ್ತು ಅದು ಪರಮೋಚ್ಚನಿಂದ ನಾನು ಆ ಆಜ್ಞೆಯನ್ನು ಪಡೆದಾಗ ಅದಾಗಿತ್ತು. ಅವನು ಇಲ್ಲಿಯೇ ಹತ್ತಿರದಲ್ಲಿದ್ದನು. "ಇದನ್ನೇ ಕುರಿತು ವಚನ ನೀಡಲಾಗಿತ್ತು, ಈಗ ಆ ಕಾರ್ಯವನ್ನು ಕೈಕೊಳ್ಳಬೇಕಾಗಿದೆ" ಎಂದು ನನಗೆ ಹೇಳಿದನು.

ಮತ್ತು ಅದು ವೈಯಕ್ತಿಕವಾದದ್ದಾಗಿರಲಿಲ್ಲ, ಸಾಮೂಹಿಕ ಸ್ವರೂಪದ್ದಾಗಿತ್ತು ಎಂಬ ಅರ್ಥ ಅಲ್ಲಿತ್ತು. ಹಾಗಾಗಿ, ಸ್ವಾಭಾವಿಕವಾಗಿ, ಅದು ಬಂದ ರೀತಿಯಿಂದಾಗಿ ಅದನ್ನು ಸಂತೋಷದಿಂದ ಒಪ್ಪಿಕೊಳ್ಳಲಾಯಿತು, ಮತ್ತು ಕೂಡಲೆ ಕಾರ್ಯಗತ–ಗೊಳಿಸಲಾಯಿತು.

ಆದರೆ ನಾನು ಆ ಅನುಭವವನ್ನು ನೆನಪಿಸಿಕೊಂಡಾಗ ಮತ್ತು ಈಗ ನನ್ನಲ್ಲಿರುವುದನ್ನು ಪರಿಗಣಿಸಿದಾಗ ...

ಸರಿ, ಶ್ರೀ ಅರವಿಂದರು ತಮ್ಮ ದೇಹವನ್ನು ತ್ಯಜಿಸುತ್ತಿದ್ದಾಗ ಕೈಕೊಂಡದ್ದು ಸ್ವಲ್ಪಮಟ್ಟಿಗೆ ಸರಿಸಮಾನವಾಗಿದೆ, ಆದಾಗ್ಯೂ ಹೆಚ್ಚಿನ ಮಟ್ಟದಲ್ಲಿ ಇಡಿಯಾದದ್ದು, ಸಂಪೂರ್ಣವಾದದ್ದು, ಪರಿಪೂರ್ಣವಾದದ್ದು. – ಏಕೆಂದರೆ ಅವರಿಗೆ ಆ ಅನುಭವವಾಗಿತ್ತು, ಅವರಿಗೆ ಅದಾಗಿತ್ತು, ನಾನವರನ್ನು ನೋಡಿದೆ, ತಮ್ಮ ಹಾಸಿಗೆಯ ಮೇಲೆ ಅವರು ಅತಿಮಾನಸರಾಗಿದ್ದರು, ಹಾಸಿಗೆಯ ಮೇಲೆ ಕುಳಿತಿದ್ದರು.

(ಮೌನ)

ಅವರು ಬರೆದಿದ್ದು ಹೀಗಿದೆ: ನಾನದನ್ನು ವೈಯಕ್ತಿಕವಾಗಿ ಕೈಕೊಳ್ಳುತ್ತಿಲ್ಲ, ನನಗಾಗಿ ಮಾಡುತ್ತಿಲ್ಲ, ಆದರೆ ಅದನ್ನು ಇಡೀ ಪೃಥ್ವಿಗಾಗಿ ಕೈಕೊಳ್ಳುತ್ತಿದ್ದೇನೆ. ನನಗೂ ಕೂಡ ನಿಖರವಾಗಿ ಅದೇ ಆಗಿತ್ತು. – ಆದರೆ ಓಹ್ ಆ ಅನುಭವ! ನನಗೆ ನಂತರ ಯಾವುದೂ ಗಣನೆಗೆ ಬರಲಿಲ್ಲ, ಜನರು, ಪೃಥ್ವಿ – ಪೃಥ್ವಿಯೇ ಸ್ವತಃ ಪರಿಪೂರ್ಣವಾಗಿ ಮಹತ್ವವಿಲ್ಲದ್ದಾಗಿತ್ತು.

**ಅನುಯಾಯಿಯೊಂದಿಗೆ ಮಾತುಕತೆ: ಜುಲೈ 15, 1961 – ಶ್ರೀಮಾತೆ**

*

"... ನೀವು A.G[1] (ಅರವಿಂದೋ ಘೋಷ) ಹಾಗೂ ಮಿರ್ರಾ ಇವರ ನಡುವೆ

1. A.G ಇದು Aurobindo Ghose ಶಬ್ದದ ಸಂಕ್ಷಿಪ್ತ ರೂಪ. ಈ ಹೆಸರನ್ನು ಅವರ ಶಿಷ್ಯಂದಿರು 1920ರ ವರೆಗೆ ಉಪಯೋಗಿಸುತ್ತಿದ್ದರು. ನಂತರ ಶ್ರೀಮಾತೆಯವರು 'ಶ್ರೀ ಅರವಿಂದರು' ಎಂಬ ಹೆಸರೇ ಸ್ವತಃ ಒಂದು ಮಂತ್ರವಾಗಿದೆ ಎಂದು ತಿಳಿಯಪಡಿಸಿದರು.

ಅತ್ಯಂತ ಕಟ್ಟುನಿಟ್ಟಿನ ಪ್ರತ್ಯೇಕತೆಯನ್ನುಂಟು ಮಾಡಿದರೆ ಅದೊಂದು ತಪ್ಪಾಗುತ್ತದೆ. ಸಾಧನೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಗೊಳಿಸುವುದಕ್ಕೆ ಇಬ್ಬರ ಪ್ರಭಾವಗಳೂ ಅವಶ್ಯವಾಗಿವೆ. ಇಬ್ಬರೂ ಒಟ್ಟಿಗೆ ಕೈಕೊಂಡ ಕಾರ್ಯ ಮಾತ್ರ ಅತಿಮಾನಸ ದೈವೀ ಸತ್ಯವನ್ನು ಭೌತಿಕ ಸ್ತರದಲ್ಲಿ ಕೆಳಗಿಳಿಸಿತರಬಲ್ಲದು. A.G ಅವರು ಜ್ಞಾನೋದಯ ಪಡೆದ ಮನಸ್ಸಿನ ಮೂಲಕ ಮಾನಸಿಕ ಹಾಗೂ ಭೌತಿಕ ಸತ್ತೆಯ ಮೇಲೆ ಕಾರ್ಯಕೈಕೊಳ್ಳುತ್ತಾರೆ. ಅವರು ಪುರುಷ ಅಂಶವನ್ನು ಪ್ರತಿನಿಧಿಸುತ್ತಾರೆ, ಅದರ ಬಲ ಪ್ರಧಾನವಾಗಿ ಜ್ಞಾನೋದಯ ಪಡೆದ (ಅಂತರ್ಬೋಧೆಯ ಅತಿಮಾನಸ ಇಲ್ಲವೆ ಆಧ್ಯಾತ್ಮಿಕ) ಜ್ಞಾನದಲ್ಲಿರುತ್ತದೆ ಮತ್ತು ಈ ಜ್ಞಾನದಲ್ಲಿ ಕಾರ್ಯಕೈಕೊಳ್ಳುವ ಸಾಮರ್ಥ್ಯದಲ್ಲಿರುತ್ತದೆ, ಅದು ಹಾಗಿರುವಾಗ ಚೈತ್ಯಸತ್ತೆ ಈ ಕ್ರಿಯೆಗೆ ಆಧಾರ ಒದಗಿಸುತ್ತದೆ ಮತ್ತು ಭೌತಿಕ ಹಾಗೂ ಪ್ರಾಣಿಕ ಸ್ತರಗಳನ್ನು ಪರಿವರ್ತನೆಗೆ ಒಳಪಡಿಸಲು ಸಹಾಯ ಮಾಡುತ್ತದೆ. ಮಿರ್ರಾ ಅವರು ನೇರವಾಗಿ ಜ್ಞಾನೋದಯ ಪಡೆದ ಚೈತ್ಯಾತ್ಮಿಕ ಪ್ರಜ್ಞೆಯಿಂದ ಭಾವನಾತ್ಮಕ ಪ್ರಾಣಿಕ ಹಾಗೂ ಭೌತಿಕ ಸತ್ತೆಗಳ ಮೇಲೆ ಕಾರ್ಯಕೈಕೊಳ್ಳುತ್ತಾರೆ, ಅದು ಹಾಗಿರುವಾಗ ಅತಿಮಾನಸ ಸತ್ತೆಯ ಜ್ಞಾನೋದಯ ಪಡೆದ ಅಂತರ್ಬೋಧೆಗಳು ಅವರಿಗೆ ಅವಶ್ಯವಾದ ಜ್ಞಾನವನ್ನು ಕೊಡುತ್ತವೆ, ಅದರಿಂದಾಗಿ ಸರಿಯಾದ ರೀತಿಗಳಲ್ಲಿ ಸೂಕ್ತ ಸಮಯದಲ್ಲಿ ಕ್ರಿಯೆ ಕೈಕೊಳ್ಳುವಂತಾಗುತ್ತದೆ. ದೈವೀ ಶಕ್ತಿಯನ್ನು ಪ್ರತಿನಿಧಿಸುವ ಅವರ ಶಕ್ತಿ ನೇರವಾಗಿ ಚೈತ್ಯಾತ್ಮಿಕ, ಪ್ರಾಣಿಕ ಹಾಗೂ ಭೌತಿಕಗಳ ಮೇಲಿದೆ ಮತ್ತು ಅವರ ಆಧ್ಯಾತ್ಮಿಕ ಜ್ಞಾನ ಪ್ರಧಾನವಾಗಿ ಸ್ವಭಾವದಲ್ಲಿ ಪ್ರಾಯೋಗಿಕವಾಗಿರುತ್ತದೆ. ಅದು ಎಂದರೆ ಮಾನಸಿಕ, ಪ್ರಾಣಿಕ ಮತ್ತು ಭೌತಿಕ ಇವುಗಳನ್ನು ಕುರಿತು ಭವ್ಯ, ವಿವರವಾದ ಜ್ಞಾನ ಹಾಗೂ ಅನುಭವ ಲೀಲೆಯಲ್ಲಿದ್ದುದಾಗಿದೆ, ಆ ಜ್ಞಾನ ಹಾಗೂ ಅನುಭವ ಮತ್ತು ಜೀವನ ಹಾಗೂ ಯೋಗಕ್ಕಾಗಿ ಅವುಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಅವರ ಜ್ಞಾನ ಹಾಗೂ ಸಾಮರ್ಥ್ಯಗಳಿವೆ.”

**Mother India, Dec 1970, p. 613** **– ಶ್ರೀ ಅರವಿಂದರು**

*

ಬಾಹ್ಯ ಜಗತ್ತಿಗೆ ಸಂಬಂಧಿಸಿದ ವಿಷಯದಲ್ಲಿ ನನ್ನ ಎಲ್ಲ ಸಿದ್ಧಿಗಳು – ನಿರ್ವಾಣ ಇತ್ಯಾದಿ – ಕೇವಲ ಸಿದ್ಧಾಂತ ರೂಪದಲ್ಲಿ ಉಳಿದುಕೊಳ್ಳುತ್ತಿದ್ದವು.

ಶ್ರೀಮಾತೆಯವರು ಪ್ರಾಯೋಗಿಕ ರೂಪವನ್ನು ತೋರಿಸಿಕೊಟ್ಟರು. ಅವರಿಲ್ಲದೆ ಯಾವುದೇ ಸಂಘಟನಾ ರೂಪದ ಪ್ರಕಟಣೆ ಸಾಧ್ಯವಾಗುತ್ತಿರಲಿಲ್ಲ. ಅವರು ಈ ಬಗೆಯ ಕಾರ್ಯವನ್ನು ತಮ್ಮ ಬಾಲ್ಯಕಾಲದಿಂದ ಕೈಕೊಳ್ಳುತ್ತ ಬಂದಿದ್ದರು.

**REF.** – ಶ್ರೀ ಅರವಿಂದರು

*

**ಶ್ರೀ ಅರವಿಂದರು ಹಾಗೂ ನಾನು ಏಕೈಕವಾಗಿದ್ದೇವೆ**

ಶ್ರೀ ಅರವಿಂದರು ಹಾಗೂ ನಾನು ಏಕೈಕವಾಗಿದ್ದೇವೆ. ಈಗ ಒಂದು ವಿಷಯವನ್ನು ನೀನು ನೆನಪಿನಲ್ಲಿಟ್ಟುಕೊಳ್ಳಬೇಕು. ಶ್ರೀ ಅರವಿಂದರ ಪ್ರಜ್ಞೆ ಹಾಗೂ ನನ್ನ ಪ್ರಜ್ಞೆ ಒಂದೇ ಆಗಿವೆ, ನಾವು ಒಂದೇ ವ್ಯಕ್ತಿಯಾಗಿದ್ದೇವೆ. ಏಕೈಕವಾಗಿರುವ ಈ ಶಕ್ತಿ ಇಲ್ಲವೆ ಸಾನ್ನಿಧ್ಯ ನಿಮ್ಮ ವೈಯಕ್ತಿಕ ಪ್ರಜ್ಞೆಯಲ್ಲಿ ಹಾದು ಹೋದಾಗ, ಅದು ಒಂದು ರೂಪ ತಾಳುತ್ತದೆ, ಅದಕ್ಕೆ ಒಂದು ತೋರಿಕೆಯಿರುತ್ತದೆ, ಅದು ನಿಮ್ಮ ಮನೋಗುಣ, ಅಭೀಪ್ಸೆ, ಆವಶ್ಯಕತೆ ಮತ್ತು ನಿಮ್ಮ ಸತ್ತೆಯ ವಿಶಿಷ್ಟ ತಿರುವು ಇವುಗಳಿಗನುಗುಣವಾಗಿ ಬದಲಾಗುತ್ತದೆ. ನಿಮ್ಮ ವೈಯಕ್ತಿಕ ಪ್ರಜ್ಞೆ ಒಂದು ಸೋಸುವ ಪಾತ್ರೆಯಂತೆ ಇಲ್ಲವೆ ಸೂಚಿ(pointer)ಯಂತೆ ಇರುತ್ತದೆಂದು ನಾನು ಹೇಳಬಹುದು. ಅದು ಅನಂತ ದೈವೀ ಸಾಧ್ಯತೆಗಳಲ್ಲಿ ಒಂದನ್ನು ಆಯ್ಕೆ ಮಾಡುತ್ತದೆ ಮತ್ತು ಅದನ್ನು ಸ್ಥಿರಗೊಳಿಸುತ್ತದೆ. ನೈಜತೆಯಲ್ಲಿ ಪ್ರತಿಯೊಬ್ಬ ಭಗವಂತನಿಂದ ನಿರೀಕ್ಷಿಸುತ್ತಿದ್ದುದನ್ನು ದೊರಕಿಸುತ್ತಾನೆ. ಭಗವಂತ ದೂರದಲ್ಲಿದ್ದಾನೆ ಹಾಗೂ ಕ್ರೂರ–ನಾಗಿದ್ದಾನೆ ಎಂದು ನೀವು ನಂಬಿದರೆ, ಅವನು ದೂರವಿದ್ದು ಕ್ರೂರನಾಗುತ್ತಾನೆ, ಏಕೆಂದರೆ ನಿಮ್ಮ ಕಟ್ಟಕಡೆಯ ಒಳಿತಿಗಾಗಿ ನೀವು ಭಗವಂತನ ಕ್ರೋಧದ ಆವಶ್ಯಕತೆ ಕಂಡುಕೊಳ್ಳುತ್ತೀರಿ. ಕಾಳೀ ದೇವಿಯನ್ನು ಪೂಜೆ ಮಾಡುವವರಿಗೆ ಅವನು ಕಾಳೀದೇವಿಯಾಗಿರುತ್ತಾನೆ. ಮತ್ತು ಭಕ್ತರಿಗೆ ದಿವ್ಯಾನಂದವಾಗಿರುತ್ತೇನೆ. ಮತ್ತು ಅವನು ಜ್ಞಾನವನ್ನು ಅರಸುವವರಿಗೆ ಸರ್ವಜ್ಞಾನ ಸ್ವರೂಪನಾಗಿರುತ್ತಾನೆ, ಮಾಯಾವಾದಿಗೆ ವಿಶ್ವಾತೀತ ಅವೈಯಕ್ತಿಕನಾದವನು ಆಗಿರುತ್ತಾನೆ, ನಾಸ್ತಿಕನಿಗೆ ನಾಸ್ತಿಕನಾಗಿರುತ್ತಾನೆ ಮತ್ತು ಪ್ರೇಮಿಯ ಪ್ರೇಮವಾಗಿರುತ್ತಾನೆ. ಪ್ರತಿಯೊಂದು ಕ್ಷಣದಲ್ಲಿ, ಪ್ರತಿಯೊಂದು ಚಲನೆಯಲ್ಲಿ ಭಗವಂತನನ್ನು ಆಂತರಿಕ ಮಾರ್ಗದರ್ಶಿ ಎಂಬ ಭಾವನೆ ತಂದುಕೊಳ್ಳುವವರಿಗೆ ಅವನು ಸಹೋದರನಂತಿರುತ್ತಾನೆ, ಹತ್ತಿರವಾಗಿರುತ್ತಾನೆ,

ಯಾವಾಗಲೂ ವಿಶ್ವಾಸಾರ್ಹನಾಗಿರುವ ಸ್ನೇಹಿತನಾಗಿರುತ್ತಾನೆ, ಸಹಾಯ ನೀಡಲು ಯಾವಾಗಲೂ ಸಿದ್ಧನಾಗಿರುತ್ತಾನೆ. ಮತ್ತು ಅವನು ಪ್ರತಿಯೊಂದನ್ನು ಒರೆಸಿಹಾಕಬಲ್ಲನು ಎಂದು ನೀವು ನಂಬಿದರೆ, ನಿಮ್ಮ ಎಲ್ಲ ಕುಂದುಕೊರತೆಗಳನ್ನು, ಎಲ್ಲ ದೋಷಗಳನ್ನು ದಣಿದುಕೊಳ್ಳದೆ ಒರೆಸಿಹಾಕುತ್ತಾನೆ ಮತ್ತು ಪ್ರತಿಯೊಂದು ಕ್ಷಣ ಅವನ ಅನಂತ ದೈವೀ ಕೃಪೆಯಿರುವ ಭಾವನೆ ತಂದುಕೊಳ್ಳುವಿರಿ. ನಿಮ್ಮ ಆಳಾತಿ ಆಳದ ಅಭೀಪ್ಸೆಯಲ್ಲಿ ಭಗವಂತನಿಂದ ಏನನ್ನು ನಿರೀಕ್ಷಿಸುತ್ತಿರುತ್ತಿರೋ ಅದಾಗಿರುತ್ತಾನೆ.

**CWM, 13/75** **– ಶ್ರೀಮಾತೆ**

*

## ಶ್ರೀಮಾತೆಯವರಲ್ಲಿ ಆಶ್ರಯ ಪಡೆಯಿರಿ

### ಈ ಯೋಗದಲ್ಲಿರುವ ಎರಡು ಶ್ರೇಷ್ಠ ಹೆಜ್ಜೆಗಳಲ್ಲಿ ಒಂದು

ಶ್ರೀಮಾತೆಯವರು ಶ್ರೀ ಅರವಿಂದರ ಅನುಯಾಯಿಯಲ್ಲ.[1] ನನಗಾದ ಸಿದ್ಧಿ ಹಾಗೂ ಅನುಭವಗಳು ಅವರಿಗೂ ಆಗಿದ್ದವು.

ಶ್ರೀಮಾತೆಯವರ ಸಾಧನೆ ಅವರು ಅತಿ ಚಿಕ್ಕವರಾದಾಗಿನಿಂದ ಪ್ರಾರಂಭ–ವಾಗಿತ್ತು. ಅವರು ಹನ್ನೆರಡು ಇಲ್ಲವೆ ಹದಿಮೂರು ವರ್ಷದವರಾಗಿದ್ದಾಗ ಪ್ರತಿದಿನ ಸಾಯಂಕಾಲ ಬಹಳಷ್ಟು ಬೋಧಕರು ಅವರಿಗೆ ಅನೇಕ ಆಧ್ಯಾತ್ಮಿಕ ಶಿಸ್ತುಪಾಲನೆ–ಗಳನ್ನು ಕಲಿಸಿಕೊಟ್ಟರು. ಅವರಲ್ಲಿ ಒಬ್ಬರು ಏಶಿಯಾ ದೇಶದ ಕಪ್ಪು ಬಣ್ಣದ ವ್ಯಕ್ತಿಯಾಗಿದ್ದರು. ನಾವು ಮೊದಲಿಗೆ ಒಬ್ಬರನ್ನೊಬ್ಬರು ಭೇಟಿ ಮಾಡಿದಾಗ, ಆ ಏಶಿಯಾ ದೇಶದ ಕಪ್ಪು ಬಣ್ಣದ ವ್ಯಕ್ತಿ ನಾನೆಂದು ಕೂಡಲೆ ಗುರುತಿಸಿದರು, ನನ್ನನ್ನು ಅವರು ಬಹಳ ಕಾಲದಿಂದ ನೋಡುತ್ತಿದ್ದರು. ಅವರು ಇಲ್ಲಿಗೆ ಬರಬೇಕು ಮತ್ತು ಸರಿಸಮ ಗುರಿಗಾಗಿ ನನ್ನೊಡನೆ ಕಾರ್ಯಕೈಕೊಳ್ಳಬೇಕು ಎಂಬುದು ದೈವ ನಿಯಾಮಕವಾಗಿತ್ತು. ಶ್ರೀಮಾತೆಯವರು ಭಾರತಕ್ಕೆ ಬರುವುದಕ್ಕಿಂತ ಮೊದಲೇ ಬುದ್ಧನ ಯೋಗ ಹಾಗೂ ಗೀತೆಯ ಯೋಗದಲ್ಲಿ ನಿಪುಣರಾಗಿದ್ದರು. ಅವರ ಯೋಗ ಭವ್ಯ ಸಮನ್ವಯದತ್ತ ಚಲಿಸುತ್ತಿತ್ತು. ಇದರ ನಂತರ ಅವರು ಇಲ್ಲಿಗೆ

---

1. ಈ ಪತ್ರವನ್ನು ಶ್ರೀ ಅರವಿಂದರು ಹೇಳಿ ಬರೆಸಿದ್ದರು, ಅದರಲ್ಲಿ ತಮ್ಮನ್ನು ಕುರಿತು ಬೇರೆಯವರು ಕೇಳಿ ಬರೆದ ರೀತಿಯದಾಗಿದೆ. (ಸಂ)

ಬರಬೇಕೆಂಬುದು ಸ್ವಾಭಾವಿಕವಾಗಿತ್ತು. ಅವರು ನನ್ನ ಯೋಗಕ್ಕೆ ಸಹಾಯ ನೀಡಿದ್ದಾರೆ, ಅದಕ್ಕೆ ಒಂದು ಮೂರ್ತರೂಪ ಕೊಡಲು ಸಹಾಯ ಮಾಡುತ್ತಿದ್ದಾರೆ. ಅವರ ಸಹಕಾರವಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ.

ಈ ಯೋಗದಲ್ಲಿರುವ ಎರಡು ಶ್ರೇಷ್ಠ ಹೆಜ್ಜೆಗಳಲ್ಲಿ ಒಂದು ಶ್ರೀಮಾತೆಯವರಲ್ಲಿ ಆಶ್ರಯ ಪಡೆಯುವುದಾಗಿದೆ.[2]

**CWSA, 32/36** **– ಶ್ರೀ ಅರವಿಂದರು**

*

**ಶ್ರೀಮಾತೆಯವರ ನಿಜವಾದ ಮಗುವಾಗಲು ಪ್ರಯತ್ನಿಸು**

ನೀನು ಶ್ರೀಮಾತೆಯವರ ಮಗು, ಮತ್ತು ಶ್ರೀಮಾತೆಯವರ ಪ್ರೇಮ ತಮ್ಮ ಮಕ್ಕಳಿಗಾಗಿ ಮಿತಿಯಿಲ್ಲದೆ ಇದೆ ಮತ್ತು ಅವರು ತಾಳ್ಮೆಯಿಂದ ಆ ಮಕ್ಕಳ ಸ್ವಭಾವದಲ್ಲಿರುವ ಕುಂದು ಕೊರತೆಗಳನ್ನು ಸಹಿಸಿಕೊಳ್ಳುತ್ತಾರೆ. ಆದರೆ ಶ್ರೀಮಾತೆಯವರ ನಿಜವಾದ ಮಗುವಾಗಲು ಪ್ರಯತ್ನಿಸು: ಅದು ನಿನ್ನೊಳಗಿದೆ, ಆದರೆ ನಿನ್ನ ಬಾಹ್ಯ ಮನಸ್ಸು ಚಿಕ್ಕ ಚಿಕ್ಕ ನಿರರ್ಥಕ ವಿಷಯಗಳಿಂದ ತುಂಬಿಕೊಂಡಿದೆ ಮತ್ತು ಬಹಳಷ್ಟು ಸಲ ಅವುಗಳನ್ನು ಕುರಿತು ಹಿಂಸಾತ್ಮಕ ಗೊಂದಲದಲ್ಲಿರುತ್ತದೆ. ನೀನು ಶ್ರೀಮಾತೆಯವರನ್ನು ಕೇವಲ ಕನಸಿನಲ್ಲಿ ಕಾಣಬಾರದು, ಆದರೆ ಅವರು ನಿನ್ನ ಬಳಿ ಹಾಗೂ ನಿನ್ನೊಳಗೆ ಎಲ್ಲ ಕಾಲದಲ್ಲಿ ಇರುವರು ಎಂಬುದನ್ನು ನೋಡುವ ಹಾಗೆ ಭಾವನೆಗೆ ತಂದುಕೊಳ್ಳುವುದನ್ನು ಕಲಿತುಕೊಳ್ಳಬೇಕು. ಆಗ ನಿನ್ನ ಮೇಲೆ ನಿಯಂತ್ರಣ ಪಡೆಯುವುದು ಹಾಗೂ ಬದಲಾಗುವುದು ಹೆಚ್ಚು ಸುಲಭವಾಗುತ್ತದೆ ಎಂಬುದನ್ನು ಕಂಡುಕೊಳ್ಳುವಿ. – ಏಕೆಂದರೆ ಅವರು ಅಲ್ಲಿರುವುದರಿಂದಾಗಿ ಅದನ್ನು ನಿನಗಾಗಿ ಮಾಡಬಲ್ಲರು.

**CWSA, 32/452–53** **– ಶ್ರೀ ಅರವಿಂದರು**

*

**ಪ್ರಶ್ನೆ :** *ಶ್ರೀಮಾತೆಯವರ ಸಾನ್ನಿಧ್ಯವಿಲ್ಲದೆ ಇದ್ದಾಗ ಸಾಧಕ ಏಕಾಕಿಯಾಗಿರುವ*

---

2. ನಂತರದ ಒಂದು ಪ್ರಸಂಗದಲ್ಲಿ ಶ್ರೀ ಅರವಿಂದರನ್ನು ಎರಡನೆಯ ಶ್ರೇಷ್ಠ ಹೆಜ್ಜೆ ಯಾವುದೆಂದು ಕೇಳಿದಾಗ "ದೈವೀ ಜೀವನಕ್ಕಾಗಿ ಸಾಧಕನ ಅಭೀಪ್ಸೆ' ಎಂದು ಉತ್ತರ ನೀಡಿದರು. (ಸಂ)

*ಭಾವನೆ ತಂದುಕೊಳ್ಳುತ್ತಾನೆ ಹಾಗೂ ವೇದನೆ ಪಡುತ್ತಾನೆ. ಅದೇ ರೀತಿಯಲ್ಲಿ ಶ್ರೀಮಾತೆಯವರು ಮಗುವನ್ನು ಕಾಣದೆ ಇದ್ದಾಗ ಅದೇ ರೀತಿ ವೇದನೆಗೊಳ–ಗಾಗುವರೆ, ಮಾನವ ಮಾತೆಗಿಂತ ಇನ್ನೂ ಹೆಚ್ಚು ದುಃಖಿತರಾಗುವರೆ?*

**ಶ್ರೀ ಅ :** ಸಂದರ್ಭ ಅಂತಹದಾಗುವುದಿದ್ದರೆ ಶ್ರೀಮಾತೆಯವರು ಎಲ್ಲ ಕಾಲದಲ್ಲಿ ಲಕ್ಷಾನುಪಟ್ಟು ದುಃಖಿತರಾಗಬೇಕಾಗುತ್ತಿತ್ತು – ಅವರು ಸಾಧಕನ ವಿಷಯದಲ್ಲಿ ಮಾತ್ರ ಏಕೆ ದುಃಖಿತರಾಗಬೇಕು, ಅವಿದ್ಯೆಯಲ್ಲಿ ಅಲೆದಾಡುತ್ತಿರುವ ಪ್ರತಿಯೊಂದು ಆತ್ಮಕ್ಕಾಗಿಯೂ ಏಕೆ ದುಃಖಪಡಬಾರದು? ಆ ಮಗು ದುಃಖಿತನಾಗಬಾರದು, ಆದರೆ ಶ್ರೀಮಾತೆಯವರು ಕರೆದಾಗ ಸರಳವಾಗಿ ಮರಳಿ ಬರಬೇಕು.

**CWSA, 32/453** **– ಶ್ರೀ ಅರವಿಂದರು**

*

**ಆಂತರಿಕ ಸಾಮೀಪ್ಯ ಮತ್ತು ಭೌತಿಕವಾಗಿ ಹತ್ತಿರವಿರುವಿಕೆ**

ಶ್ರೀಮಾತೆಯವರಿಗೆ ತೆರೆದಿಟ್ಟುಕೊಂಡವರು, ತಮ್ಮ ಆಂತರಿಕ ಸತ್ತೆಯಲ್ಲಿ ಅವರ ಸಮೀಪ ಇರುವವರು ಹಾಗೂ ಅವರ ಸಂಕಲ್ಪದೊಂದಿಗೆ ಏಕವಾದವರು ಆದ ಮಕ್ಕಳು ಅವರಿಗೆ ಅತ್ಯಂತ ಸಮೀಪದಲ್ಲಿ ಇರುವವರಾಗಿರುತ್ತಾರೆ – ದೈಹಿಕವಾಗಿ ಅವರ ಹತ್ತಿರ ಬರುವವರಲ್ಲ.

**CWSA, 32/497** **– ಶ್ರೀ ಅರವಿಂದರು**

*

**ಪ್ರಶ್ನೆ :** *ನೀವು "ಶ್ರೀಮಾತೆಯವರಿಗೆ ತೆರೆದಿಟ್ಟುಕೊಂಡವರು, ತಮ್ಮ ಆಂತರಿಕ ಸತ್ತೆಯಲ್ಲಿ ಅವರ ಸಮೀಪ ಇರುವವರು ಹಾಗೂ ಅವರ ಸಂಕಲ್ಪದೊಡನೆ ಏಕವಾದವರು ಆದ ಮಕ್ಕಳು ಅವರಿಗೆ ಅತ್ಯಂತ ಸಮೀಪದಲ್ಲಿ ಇರುವವ–ರಾಗಿರುತ್ತಾರೆ – ದೈಹಿಕವಾಗಿ ಅವರ ಹತ್ತಿರವಿರುವವರಲ್ಲ" ಎಂದು ಬರೆದಿರುವಿರಿ. ಇದರ ಸತ್ಯವನ್ನು ನಾನು ನಿರಾಕರಿಸುವುದಿಲ್ಲ. ಆದರೆ ಶ್ರೀಮಾತೆಯವರು ದೇಹಧಾರಣ ಮಾಡಿದ್ದೇಕೆ ಮತ್ತು ನಾವು ಪಾಂಡಿಚೇರಿಯಲ್ಲಿ ಏಕಿದ್ದೇವೆ? ಎಲ್ಲಿ ಬೇಕಾದಲ್ಲಿ ಮನುಷ್ಯ ಆಂತರಿಕ ಸಂಬಂಧ ಹೊಂದಬಹುದು, ಇಲ್ಲಿಗೆ ಬರುವ ಆವಶ್ಯಕತೆ ಇಲ್ಲ.*

**ಶ್ರೀ ಅ :** ಶ್ರೀಮಾತೆಯವರು ದೇಹಧಾರಣ ಮಾಡಿದ್ದು ಭೌತಿಕ ಸ್ವಭಾವದಲ್ಲಿ ಕೈಕೊಳ್ಳಬೇಕಾದ ಕಾರ್ಯಕ್ಕಾಗಿದೆ (ಭೌತಿಕ ಜಗತ್ತಿನಲ್ಲಿ ಒಂದು ಬದಲಾವಣೆ ತರುವುದಕ್ಕಾಗಿಯೂ ಇದೆ.) ಜನರೊಡನೆ ಒಂದು ಭೌತಿಕ ಸಂಬಂಧ ಹೊಂದುವುದಕ್ಕೆ ಅವರು ಬಂದಿಲ್ಲ. ಕೆಲವರು ಅವರೊಡನೆ ಕಾರ್ಯದಲ್ಲಿ ಪಾಲುಗೊಳ್ಳುವುದಕ್ಕಾಗಿ ಬಂದಿದ್ದಾರೆ, ಇತರರಿಗೆ ಅವರು ಕರೆ ಕೊಟ್ಟಿದ್ದಾರೆ. ಕೆಲವರು ಪ್ರಕಾಶವನ್ನು ಅರಸುವುದಕ್ಕಾಗಿ ಬಂದಿದ್ದಾರೆ. ಪ್ರತಿಯೊಬ್ಬರೊಡನೆ ಅವರು ವೈಯಕ್ತಿಕ ಸಂಬಂಧ ಹೊಂದಿದ್ದಾರೆ ಇಲ್ಲವೆ ಸಂಬಂಧ ಹೊಂದುವ ಸಾಧ್ಯತೆ ಇದೆ. ಆದರೆ ಪ್ರತಿಯೊಬ್ಬರದೂ ಅವರದೇ ಬಗೆಯದಾಗಿರುತ್ತದೆ ಮತ್ತು ಅವರು ಎಲ್ಲರೊಡನೆ ಒಂದೇ ರೀತಿಯ ಕಾರ್ಯಕೈಕೊಳ್ಳಲಿ ಎಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ಕೆಲವರು ಶ್ರೀಮಾತೆಯವರಿಗೆ ಭೌತಿಕವಾಗಿ ಹತ್ತಿರವಿರುತ್ತಾರೆ ಎಂಬ ಕಾರಣದಿಂದ ತಾವೂ ಭೌತಿಕವಾಗಿ ಹತ್ತಿರವಿರಬೇಕೆಂಬ ಹಕ್ಕನ್ನು ಯಾರೂ ಸಾಧಿಸಲಾರರು. ಕೆಲವರಿಗೆ ಅವರೊಡನೆ ಹತ್ತಿರದ ಸಂಬಂಧವಿದೆ, ಆದರೆ ಅವರು ಭೌತಿಕವಾಗಿ ಶ್ರೀಮಾತೆಯವರ ಹತ್ತಿರ ಇರುವುದಿಲ್ಲ – ಕೆಲವರಿಗೆ ಹತ್ತಿರದ ಸಂಬಂಧ ಕಡಿಮೆ ಇದೆ, ಆದಾಗ್ಯೂ ಒಂದಿಲ್ಲೊಂದು ಕಾರಣದಿಂದಾಗಿ ಬಹಳಷ್ಟು ಸಲ ಇಲ್ಲವೆ ದೀರ್ಘಕಾಲದವರೆಗೆ ಅವರನ್ನು ಭೌತಿಕವಾಗಿ ನೋಡುತ್ತಿರಬಹುದು. ಭೌತಿಕ ಮನಸ್ಸಿನ ಗಣಿತ ರೂಪದ ತುಚ್ಛ ನಿಯಮಗಳನ್ನು ಅನ್ವಯಿಸುವುದು ಅಸಂಬದ್ಧವಾದದ್ದು – ನಿಮ್ಮ ಭೌತಿಕ ಮನಸ್ಸು ಶ್ರೀಮಾತೆಯವರು ಏನನ್ನು ಕೈಕೊಳ್ಳುತ್ತಾರೆ ಎಂಬುದನ್ನು ತಿಳಿದುಕೊಳ್ಳಲಾರದು, ಆ ಮನಸ್ಸಿನ ಮೌಲ್ಯಗಳು, ಮಾನದಂಡಗಳು, ಮತ್ತು ವಿಚಾರಗಳು ಅವರವಲ್ಲ. ಅವರೇನು ಕೈಕೊಳ್ಳಬೇಕು ಎಂಬುದರ ಮಾಪನವನ್ನು ನಿಮ್ಮ ವೈಯಕ್ತಿಕ ಪ್ರಾಣಿಕ ಒತ್ತಾಯದಿಂದ ಬೇಡುವುದಾಗಲಿ, ಬಯಸುವುದಾಗಲಿ ಅದಕ್ಕಿಂತ ಇನ್ನೂ ಹೆಚ್ಚು ಕೆಟ್ಟದಾದದ್ದು. ಆ ಮಾರ್ಗದಲ್ಲಿ ಆಧ್ಯಾತ್ಮಿಕ ಹಾಳಾಗುವಿಕೆ ಇರುತ್ತದೆ. ಪ್ರತಿಯೊಬ್ಬರ ಸಂದರ್ಭದಲ್ಲಿ ಭಿನ್ನ ಕಾರಣಗಳಿಂದಾಗಿ ಆ ಸಂದರ್ಭಕ್ಕೆ ಯೋಗ್ಯವಾದದ್ದನ್ನು ಕೈಕೊಳ್ಳುತ್ತಾರೆ.

**CWSA, 32/509** **– ಶ್ರೀ ಅರವಿಂದರು**

*

**ಶ್ರೀಮಾತೆಯವರ ಸಹಾಯ ಹಾಗೂ ನನ್ನ ಸಹಾಯ ನಿಮಗಾಗಿ ಯಾವಾಗಲೂ ಅಲ್ಲಿವೆ**

ಶ್ರೀಮಾತೆಯವರ ಸಹಾಯ ಹಾಗೂ ನನ್ನ ಸಹಾಯ ನಿಮಗಾಗಿ ಯಾವಾಗಲೂ ಅಲ್ಲಿವೆ. ನೀವು ಪೂರ್ತಿಯಾಗಿ ಅದರತ್ತ ಹೊರಳಬೇಕು, ಅದು ನಿಮ್ಮ ಮೇಲೆ ಕಾರ್ಯಕೈಕೊಳ್ಳುವುದು. ನಿನ್ನಲ್ಲಿ ಯೋಗ್ಯತೆ ಇಲ್ಲದುದನ್ನು ಕುರಿತು ತಪ್ಪು ವಿಚಾರ, ಅದಕ್ಕೆ ಅಡ್ಡಲಾಗಿ ಬಂದಿದೆ. ಶ್ರೀಮಾತೆಯವರ ಕೃಪೆಯನ್ನು ಸ್ವೀಕರಿಸಲು ನಿನ್ನಲ್ಲಿರುವ ಕೆಟ್ಟ ವಿಷಯಗಳು ತಡೆ ಉಂಟುಮಾಡುತ್ತವೆ, ಅಭೀಪ್ಸೆಯಲ್ಲಿಯ ಕೊರತೆ ನಿನಗೆ ಸಿದ್ಧಿ ಹಾಗೂ ಅನುಭವಗಳು ದೊರಕುವುದಕ್ಕೆ ತಡೆ ಉಂಟುಮಾಡುತ್ತದೆ. ಈ ವಿಚಾರಗಳು ಬಹಳ ತಪ್ಪಾದವುಗಳು, ಅಸತ್ಯವಾದವುಗಳು – ಅವೂ ಸಹ ನಿನ್ನ ಸ್ವಂತದ ಯೋಚನೆಗಳಲ್ಲ, ಅವುಗಳನ್ನು ಹೊರಗಿನಿಂದ ನಿನ್ನ ಮೇಲೆ ಚೆಲ್ಲಿಕೊಡಲಾದ ಸೂಚನೆಗಳಾಗಿರುತ್ತವೆ, ಅವುಗಳ ಉದ್ದೇಶ ನಿನ್ನಲ್ಲಿ ಖಿನ್ನತೆಯನ್ನು ಉಂಟು ಮಾಡುವುದಿರುತ್ತದೆ. ಯೋಗ್ಯತೆ ಇಲ್ಲದಿರುವಿಕೆ ಎಂಬುದಿಲ್ಲ, ಅಡ್ಡಲಾಗಿ ಬರುವ ಕೆಟ್ಟ ವಿಷಯ ಅಂತರಂಗದಲ್ಲಿರುವುದಿಲ್ಲ, ಅನುಭವ ನಿಂತುಹೋಗುವುದಕ್ಕೆ ಕಾರಣವಾಗುವ ಅಭೀಪ್ಸೆಯಲ್ಲಿಯ ಕೊರತೆ ಇರುವುದಿಲ್ಲ. ಖಿನ್ನತೆ, ತಮ್ಮಲ್ಲಿಯೇ ಅಪನಂಬಿಕೆ, ನಿರಾಶೆಗೊಳಗಾಗುವುದು ಇವುಗಳು ಕಾರಣವೇ ಹೊರತು ಬೇರೆ ಕಾರಣವಿರುವುದಿಲ್ಲ. ನಿನಗೆ ಬರೆದ ಹಾಗೆ ಎಲ್ಲ ಸಾಧಕರಿಗೂ, ಅವರಲ್ಲಿ ಅತ್ಯಂತ ಶ್ರೇಷ್ಠರಾದವರಿಗೂ, ಬಲಿಷ್ಠರಾದವರಿಗೂ ಸಾಧನೆಯ ಪ್ರವಾಹದಲ್ಲಿ ವಿಚ್ಛೇದ ಉಂಟಾಗುತ್ತದೆ, ಅದು ಸಾಧಕ ತಾನು ಅಯೋಗ್ಯ, ತನಗೆ ಭರವಸೆ ಇಲ್ಲ ಎಂದು ಯೋಚಿಸಿ ಇಲ್ಲಿಂದ ಹೊರಟು ಹೋಗುವುದಕ್ಕೆ ಕಾರಣವಲ್ಲ. ಸ್ವಲ್ಪಮಟ್ಟಿಗಿನ ಶಾಂತಸ್ಥಿತಿ ಆ ಪ್ರವಾಹವನ್ನು ಮರಳಿ ತರುತ್ತದೆ. ನೀನು ಅವಶ್ಯವಾದ ಅನುಭವಗಳನ್ನು ಪಡೆಯುತ್ತಿದ್ದಿ, ಅವಶ್ಯವಾದ ಪ್ರಗತಿಯನ್ನು ಸಾಧಿಸುತ್ತಿದ್ದಿ, ಭೌತಿಕ ಪ್ರಜ್ಞೆಯ ಕೆಲವು ತೊಂದರೆಗಳು ಬರುವುದರ ಮೂಲಕ ಅವುಗಳನ್ನು ಕೆಲಕಾಲ ತಡೆದು ಹಿಡಿದಿಟ್ಟಿದ್ದವು. ಅದು ಎಲ್ಲರಿಗೂ ಸಂಭವಿಸುತ್ತದೆ, ನಾನು ವಿವರಣೆ ನೀಡಿದ ಹಾಗೆ ವಿಶೇಷವಾಗಿ ನಿನಗಾಗಿ ಎಂದು ಆಗಿಲ್ಲ. ಈ ತೊಂದರೆಗಳು ಯಾವಾಗಲೂ ಬರುತ್ತವೆ, ಅವುಗಳ ಮೇಲೆ ಜಯ ಸಾಧಿಸಬೇಕು. ದೈವೀ ಶಕ್ತಿಯ ಕಾರ್ಯಗತಿಯಿಂದಾಗಿ ಒಮ್ಮೆ ಅವುಗಳ ಮೇಲೆ ಜಯ ಸಾಧಿಸಿದ ನಂತರ ಸಾಧನೆ ಮೊದಲಿನಂತೆ ಮುಂದುವರಿದುಕೊಂಡು ಹೋಗುತ್ತದೆ. ಆದರೆ ನಿನ್ನಲ್ಲಿ ಯೋಗ್ಯತೆ

ಇಲ್ಲದಿರುವುದು, ಹಾಗೂ ಅಭೀಪ್ಸೆಯ ಕೊರತೆ ಇರುವುದು ಕಾರಣವೆಂದು ಯೋಚನೆಗೆ ಅನುವು ಮಾಡಿಕೊಡಲು ಪ್ರಾರಂಭಿಸಿದಿ ಮತ್ತು ಇಡಿಯಾಗಿ ಖಿನ್ನತೆಗೆ ಒಳಗಾಗಿಬಿಟ್ಟೆ. ನೀನು ಅದೆಲ್ಲವನ್ನೂ ಅಲುಗಾಡಿಸಿ ಚೆಲ್ಲಿಕೊಡಬೇಕು, ನಿನಗೆ ಬರುವ ಯೋಚನೆಗಳ ಸೂಚನೆಗಳನ್ನು ತಿರಸ್ಕರಿಸಬೇಕು. ಯಾವ ಸಾಧಕನೂ ಯೋಗ್ಯತೆಯಿಲ್ಲದಿರುವಿಕೆ, ಹತಾಶ ಪರಿಸ್ಥಿತಿ ಇಂತಹವುಗಳನ್ನು ಕುರಿತು ಇರುವ ವಿಚಾರಗಳಲ್ಲಿ ಲೋಲನಾಗಬಾರದು– ಅವು ಬಹಳ ಅಪ್ರಸ್ತುತ, ಏಕೆಂದರೆ ಮನುಷ್ಯನ ವೈಯಕ್ತಿಕ ಅರ್ಹತೆ ಮತ್ತು ಯೋಗ್ಯವಾಗಿರುವಿಕೆ ಇವು ಅವನು ಯಶಸ್ವಿಯಾಗುವಂತೆ ಮಾಡುವುದಿಲ್ಲ, ಆದರೆ ಶ್ರೀಮಾತೆಯವರ ದೈವೀ ಕೃಪೆ ಮತ್ತು ಸಾಮರ್ಥ್ಯ, ಅವರ ದೈವೀ ಕೃಪೆಗೆ ಆತ್ಮದ ಒಪ್ಪಿಕೊಳ್ಳುವಿಕೆ ಮತ್ತು ಶ್ರೀಮಾತೆಯವರ ಶಕ್ತಿಯ ಕಾರ್ಯಗತಿ ಅದನ್ನು ಮಾಡುತ್ತವೆ.

ಈ ಎಲ್ಲ ಅಂಧಕಾರದ ಯೋಚನೆಗಳಿಂದ ಹೊರಳು ಮತ್ತು ಕೇವಲ ಶ್ರೀಮಾತೆಯವರತ್ತ ನೋಡು, ಪರಿಣಾಮಕ್ಕಾಗಿ ಮತ್ತು ಆಸೆಗಾಗಿ ತಾಳ್ಮೆಯನ್ನು ಕಳೆದುಕೊಳ್ಳದೆ ಅವರತ್ತ ನೋಡು, ಆದರೆ ವಿಶ್ವಾಸ ಹಾಗೂ ಗಾಢನಂಬಿಕೆ ನಿನ್ನಲ್ಲಿರಲಿ ಮತ್ತು ಅವರ ಕಾರ್ಯಗತಿಗಳು ನಿನಗೆ ಶಾಂತಸ್ಥಿತಿಯನ್ನು ಮತ್ತು ಚೈತ್ಯದ ತೆರೆದಿರಿಸುವಿಕೆ ಮತ್ತು ಸಿದ್ಧಿಗಳ ಪುನರುಜ್ಜೀವನವನ್ನು ತರಲಿ. ಅದು ನೀನು ಅರಸುತ್ತಿರುವ ಹೆಚ್ಚು ತುಂಬಿಕೊಂಡ ನಂಬಿಕೆ ಮತ್ತು ದೈವೀ ಪ್ರೇಮವನ್ನು ತಂದುಕೊಡುತ್ತದೆ.

*

**ಎರಡು ಸಾಧ್ಯತೆಗಳು**

ಅಲ್ಲಿ ಎರಡು ಸಾಧ್ಯತೆಗಳಿವೆ: ವೈಯಕ್ತಿಕ ಪ್ರಯತ್ನದಿಂದ ಪರಿಶುದ್ಧ–ಗೊಳ್ಳುವುದಾಗಿದೆ, ಅದಕ್ಕೆ ದೀರ್ಘಕಾಲ ಬೇಕಾಗುತ್ತದೆ, ಇದು ಒಂದು ಸಾಧ್ಯತೆ, ಇನ್ನೊಂದು ಸಾಮಾನ್ಯವಾಗಿ ತನ್ನ ಕ್ರಿಯೆಯಲ್ಲಿ ತೀವ್ರಗತಿಯದಾದ ದೈವೀ ಕೃಪೆಯ ಮಧ್ಯ ಪ್ರವೇಶಿಸುವಿಕೆ. ಎರಡನೆಯದಕ್ಕಾಗಿ ಅಲ್ಲಿ ಸಂಪೂರ್ಣ ಶರಣಾಗತಿ ಹಾಗೂ ಸ್ವ–ಅರ್ಪಣೆ ಇರಬೇಕು ಮತ್ತು ಅದಕ್ಕಾಗಿ ಮತ್ತೆ, ಸಾಮಾನ್ಯವಾಗಿ, ಬಹಳ ಶಾಂತಿಯಿಂದಿರುವ ಮತ್ತು ದೈವೀ ಶಕ್ತಿಗೆ ಪ್ರತಿಯೊಂದು ಹೆಜ್ಜೆಯಲ್ಲಿ ಆಧಾರ ನೀಡಲು, ಅಂಟಿಕೊಂಡು ಕಾರ್ಯಮಾಡಲು ಪೂರ್ತಿಯಾಗಿ ಅನುವು

ಮಾಡಿಕೊಡುವ ಮನಸ್ಸಿರಬೇಕು, ಆದರೆ ಹಾಗಿರದಿದ್ದರೆ ನಿಶ್ಚಲವಾಗಿ ಶಾಂತರೀತಿಯಲ್ಲಿ ಉಳಿದುಕೊಳ್ಳಬೇಕು. ಈ ಕಡೆಯ ಷರತ್ತು ಶ್ರೀ ರಾಮಕೃಷ್ಣರು ಹೇಳಿದ ಬೆಕ್ಕಿನ ಮರಿಯ ಮನೋಭಾವವನ್ನು ಹೋಲುತ್ತದೆ, ಅದನ್ನು ದೊರಕಿಸುವುದು ಕಠಿಣವಾದದ್ದು. ತಮ್ಮ ಯೋಚನೆಯ ಕ್ರಿಯಾಶೀಲ ಚಲನೆಯನ್ನು, ಸಂಕಲ್ಪವನ್ನು ರೂಢಿಸಿಕೊಂಡ ಜನರು ತಾವು ಕೈಕೊಳ್ಳುವುದೆಲ್ಲದರಲ್ಲಿ ಆ ಕ್ರಿಯೆಯನ್ನು ನಿಶ್ಚಲಗೊಳಿಸುವುದು ಮತ್ತು ಮಾನಸಿಕ ಸ್ವ–ಅರ್ಪಣೆಯ ಶಾಂತಸ್ಥಿತಿಯಲ್ಲಿರುವುದು ಕಠಿಣವಾದದ್ದೆಂದು ಕಂಡುಕೊಳ್ಳುತ್ತಾರೆ. ಇದರರ್ಥ ಅವರು ಯೋಗವನ್ನು ಕೈಕೊಳ್ಳಲಾರರು ಇಲ್ಲವೆ ಸ್ವ–ಅರ್ಪಣೆಯತ್ತ ತಲುಪಲಾರರು ಎಂದಾಗುವುದಿಲ್ಲ– ಪರಿಶುದ್ಧತೆ ಹಾಗೂ ಸ್ವ–ಅರ್ಪಣೆ ಇವುಗಳನ್ನು ದೊರಕಿಸು–ವುದಕ್ಕೆ ದೀರ್ಘಕಾಲ ಬೇಕಾಗುತ್ತದೆ ಮತ್ತು ಅದರಾದ್ಯಂತ ಸಾಗಿ ಹೋಗುವುದಕ್ಕೆ ಮನುಷ್ಯನಲ್ಲಿ ತಾಳ್ಮೆ, ಏಕರೂಪದ ಪಟ್ಟುಹಿಡಿಯುವಿಕೆ ಮತ್ತು ನಿರ್ಧಾರ ಇವು ಇರಬೇಕಾಗುತ್ತದೆ.

*

**ಆಧ್ಯಾತ್ಮಿಕ ಪ್ರಗತಿ ಮತ್ತು ಬಾಹ್ಯ ಪರಿಸ್ಥಿತಿಗಳು**

ನಾವು ಅಂತರಂಗದಿಂದ ಬಾಹ್ಯ ಪರಿಸ್ಥಿತಿಗಳ ಮೇಲೆ ಪ್ರತಿಕ್ರಿಯಿಸುವಷ್ಟು ಆಂತರಿಕ ಆಧ್ಯಾತ್ಮಿಕ ಪ್ರಗತಿ ಆ ಪರಿಸ್ಥಿತಿಗಳ ಮೇಲೆ ಅವಲಂಬಿಸಿರುವುದಿಲ್ಲ – ಅದು ಯಾವಾಗಲೂ ಆಧ್ಯಾತ್ಮಿಕ ಅನುಭವದ ಕಟ್ಟಕಡೆಯ ತೀರ್ಪಾಗಿರುತ್ತದೆ. ಆ ಕಾರಣದಿಂದಾಗಿಯೇ ನಾವು ಸರಿಯಾದ ಮನೋಭಾವ ಹೊಂದಿರುವುದರ ಮೇಲೆ ಹಾಗೂ ಅದರಲ್ಲಿ ಪಟ್ಟು ಹಿಡಿದು ಉಳಿದುಕೊಳ್ಳುವುದರ ಮೇಲೆ ಒತ್ತಾಯದಿಂದ ಹೇಳುತ್ತೇವೆ, ಅಲ್ಲಿ ಬಾಹ್ಯ ಪರಿಸ್ಥಿತಿಗಳ ಮೇಲೆ ಅವಲಂಬಿಸಿರದ ಸ್ಥಿತಿ ಇರಬೇಕು, ಅದು ಸಮತೆ ಹಾಗೂ ಸ್ಥಿರತೆಗಳಿರುವ ಸ್ಥಿತಿ; ಅದು ಒಮ್ಮೆಗೆ ಆಂತರಿಕ ಸಂತೋಷದ ಸ್ಥಿತಿಯಾಗಿರದಿದ್ದರೆ ಹೆಚ್ಚು ಹೆಚ್ಚಾಗಿ ಅಂತರಂಗದಲ್ಲಿ ಸಾಗಿ ಹೋಗಬೇಕು ಮತ್ತು ಅಂತರಂಗದಿಂದ ಬಾಹ್ಯದತ್ತ ನೋಡಬೇಕು, ಯಾವಾಗಲೂ ಆಘಾತಗಳು ಹಾಗೂ ಹೊಡೆತಗಳ ಅಧೀನದಲ್ಲಿರುವ ಮೇಲ್ಮೈ ಮನಸ್ಸಿನ ಮೇಲೆ ಜೀವಿಸಬಾರದು. ಕೇವಲ ಆ ಆಂತರಿಕ ಸ್ಥಿತಿಯಿಂದ ಮನುಷ್ಯ ಜೀವನಕ್ಕಿಂತ ಹಾಗೂ ಅದರ ಕ್ಷೋಭೆಗೊಳಪಡಿಸುವ ಶಕ್ತಿಗಳಿಗಿಂತ ಹೆಚ್ಚು ಬಲಿಷ್ಠನಾಗಬಲ್ಲನು ಮತ್ತು ಅವುಗಳ ಮೇಲೆ ಜಯ ಸಾಧಿಸಬಲ್ಲನು.

ಅಂತರಂಗದಲ್ಲಿ ಅಚಂಚಲತೆಯಿಂದಿರುವುದು, ಮುಂದೆ ಸಾಗಿ ಹೋಗುವುದಕ್ಕಾಗಿ ಸಂಕಲ್ಪದಲ್ಲಿ ಸ್ಥಿರವಾಗಿರುವುದು, ತೊಂದರೆಗಳಿಂದ, ಏರಿಳಿತಗಳಿಂದ ಕ್ಷೋಭೆಗೊಳಗಾಗದೆ, ಎದೆಗುಂದದರೆ ಇರುವುದು ಇದು (ಆಧ್ಯಾತ್ಮಿಕ) ಮಾರ್ಗದ ಮೇಲೆ ಸಾಗಲು ಕಲಿತುಕೊಳ್ಳಬೇಕಾದ ಮೊದಲ ಪಾಠಗಳಲ್ಲಿ ಒಂದು. ಹಾಗೆ ಮಾಡದೆ ಇರುವುದು ಪ್ರಜ್ಞೆಯ ಅಸ್ಥಿರತೆಗೆ ಹಾಗೂ ನೀನು ಹೇಳುವ ಅನುಭವವನ್ನು ಕಾಪಾಡಿಕೊಂಡು ಬರುವುದರಲ್ಲಿಯ ತೊಂದರೆಗೆ ಉತ್ತೇಜನ ನೀಡಿದಂತಾಗುವುದು. ಅಂತರಂಗದಲ್ಲಿ ನೀನು ಅಚಂಚಲತೆಯನ್ನು ಹಾಗೂ ದೃಢತೆಯನ್ನು ಕಾಪಾಡಿಕೊಂಡು ಬಂದರೆ ಅನುಭವದ ದಾರಿಗಳು ಒಂದು ಬಗೆಯ ಏಕರೂಪತೆಯಿಂದ ಸಾಗಿ ಹೋಗಬಲ್ಲವು – ಆದಾಗ್ಯೂ ಆ ದಾರಿಗಳಲ್ಲಿ ಎಂದೆಂದಿಗೂ ವಿಚ್ಛೇದ ಹಾಗೂ ಏರಿಳಿತಗಳು ಇರದೆ ಇರುವ ಅವಧಿಗಳು ಇರಲಾರವು, ಆದರೆ ಇವುಗಳೊಡನೆ ಯೋಗ್ಯ ರೀತಿಯಲ್ಲಿ ನಡೆದುಕೊಂಡರೆ, ಅವು ಜೀರ್ಣಿಸಿಕೊಳ್ಳುವ ತೊಂದರೆಗಳನ್ನು ಬರಿದು ಮಾಡುವ ಅವಧಿಗಳಾಗಿರುತ್ತವೆ, ಸಾಧನೆಯನ್ನು ನಿರಾಕರಣೆ ಮಾಡುವ ಅವಧಿಗಳಾಗುವುದಿಲ್ಲ. ಬಾಹ್ಯ ಪರಿಸ್ಥಿತಿಗಳಿಗಿಂತ ಆಧ್ಯಾತ್ಮಿಕ ವಾತಾವರಣ ಬಹಳ ಮಹತ್ವದ್ದು. ಮನುಷ್ಯ ಆ ವಾತಾವರಣವನ್ನು ದೊರಕಿಸಬಲ್ಲನಾದರೆ ಮತ್ತು ಉಸಿರಾಡಿಸಲು ಹಾಗೂ ಜೀವಿಸಲು ತನ್ನದೇ ಆಧ್ಯಾತ್ಮಿಕ ಹವೆಯನ್ನು ಸೃಷ್ಟಿಸಬಲ್ಲನಾದರೆ ಅದು ಪ್ರಗತಿಗೆ ನಿಜವಾದ ಪರಿಸ್ಥಿತಿಯಾಗಿರುತ್ತದೆ.

*

**ಶ್ರೀಮಾತೆಯವರ ಸಾನ್ನಿಧ್ಯಕ್ಕೆ ಹಾಗೂ ಸಾಮರ್ಥ್ಯಕ್ಕೆ ಕರೆಕೊಡಿರಿ**

ಈ ಯೋಗದಲ್ಲಿ ಎಲ್ಲವೂ ದೈವೀ ಪ್ರಭಾವಕ್ಕೆ ಮನುಷ್ಯ ತೆರೆದಿರಿಸಿಕೊಂಡಿರುತ್ತಾನೋ ಇಲ್ಲವೋ ಎಂಬುದರ ಮೇಲೆ ಅವಲಂಬಿಸಿದೆ. ಅಭೀಪ್ಸೆಯಲ್ಲಿ ನಿಷ್ಕಾಪಟ್ಯವಿದ್ದರೆ, ಉಚ್ಚತರ ಪ್ರಜ್ಞೆಯತ್ತ ತಲುಪಲು ತಾಳ್ಮೆಯಿದ್ದ ಸಂಕಲ್ಪವಿದ್ದರೆ ಆಗ ಎಲ್ಲ ಅಡೆತಡೆಗಳಿದ್ದಾಗಲೂ ತೆರೆದಿರಿಸಿಕೊಳ್ಳುವಿಕೆಯನ್ನು ತಲುಪುವುದು ಒಂದಿಲ್ಲೊಂದು ರೀತಿಯಲ್ಲಿ ನಿಶ್ಚಿತವಾಗಿರುತ್ತದೆ. ಮನಸ್ಸಿನ, ಹೃದಯದ ಹಾಗೂ ದೇಹದ ತಯಾರಿ ಮಾಡಿಕೊಂಡಿರುವಿಕೆ, ಮಾಡಿಕೊಂಡಿರದೆ ಇರುವಿಕೆ ಈ ರೀತಿಗಳಿಗನುಗುಣವಾಗಿ ಅದು ಕಡಿಮೆ ಕಾಲ ಇಲ್ಲವೆ ದೀರ್ಘಕಾಲ ತೆಗೆದು–

ಕೊಳ್ಳಬಹುದು. ಹಾಗಾಗಿ ಮನುಷ್ಯನಲ್ಲಿ ಅವಶ್ಯವಾದ ತಾಳ್ಮೆ ಇಲ್ಲದೆ ಇದ್ದರೆ, ಪ್ರಾರಂಭದಲ್ಲಿಯ ತೊಂದರೆಯ ಕಾರಣದಿಂದಾಗಿ ಪ್ರಯತ್ನವನ್ನು ಬಿಟ್ಟು–ಕೊಡಬಹುದು. ಈ ಯೋಗದಲ್ಲಿ ಹೃದಯ ಸ್ಥಾನದಲ್ಲಿ ಏಕಾಗ್ರತೆ ಕೈಕೊಳ್ಳುವುದಕ್ಕೆ ಆದ್ಯತೆ ನೀಡಬೇಕು, ಅಲ್ಲಿ ಶ್ರೀಮಾತೆಯವರ ಸಾನ್ನಿಧ್ಯ ಹಾಗೂ ಸಾಮರ್ಥ್ಯಗಳು ಬರಲು ಕರೆಕೊಡಬೇಕು, ಅವುಗಳ ಕಾರ್ಯಗತಿಗಳು ಪ್ರಜ್ಞೆಯನ್ನು ಪರಿವರ್ತಿಸು–ವಂತಾಗಬೇಕು, ಇದಲ್ಲದೆ ಬೇರೆ ವಿಧಾನವಿಲ್ಲ, ಮನುಷ್ಯ ಶಿರದಲ್ಲಿ ಇಲ್ಲವೆ ಎರಡು ಹುಬ್ಬುಗಳ ನಡುವೆ ಏಕಾಗ್ರತೆ ಕೈಕೊಳ್ಳಬಹುದು, ಆದರೆ ಬಹಳಷ್ಟು ಜನರಿಗೆ ಇದು ಬಹಳ ಕಷ್ಟಕರವಾದ ತೆರೆದಿರಿಸಿಕೊಳ್ಳುವಿಕೆಯಾಗಿರುತ್ತದೆ. ಮನಸ್ಸು ಅಚಂಚಲ–ವಾದಾಗ ಮತ್ತು ಏಕಾಗ್ರತೆ ದೃಢವಾದಾಗ, ಅಭೀಪ್ಸೆ ಗಾಢವಾದಾಗ ಅನುಭವದ ಪ್ರಾರಂಭವಾಗುತ್ತದೆ. ನಂಬಿಕೆ ಹೆಚ್ಚಾದ ಹಾಗೆ ಪರಿಣಾಮ ತೀವ್ರಗತಿಯದಾಗುವ ಸಾಧ್ಯತೆಯಿರುತ್ತದೆ. ಉಳಿದದ್ದಕ್ಕಾಗಿ ಮನುಷ್ಯ ತನ್ನದೇ ಪ್ರಯತ್ನಗಳ ಮೇಲೆ ಅವಲಂಬಿಸಿರಬಾರದು, ಆದರೆ ಭಗವಂತನೊಡನೆ ಸಂಪರ್ಕ ಸಾಧಿಸುವುದರಲ್ಲಿ ಮತ್ತು ಶ್ರೀಮಾತೆಯವರ ಸಾಮರ್ಥ್ಯಕ್ಕೆ ಹಾಗೂ ಸಾನ್ನಿಧ್ಯಗಳಿಗೆ ಗ್ರಹಣಶಕ್ತಿಯನ್ನು ಪಡೆಯುವುದರಲ್ಲಿ ಯಶಸ್ವಿಯಾಗಬೇಕು.

**CWSA, 29/34–35, 83, 140** **– ಶ್ರೀ ಅರವಿಂದರು**

*

... ನಾನು ಮೊದಲು ಕಾರ್ಯ ಪ್ರಾರಂಭಿಸಿದಾಗ (ವೈಯಕ್ತಿಕವಾಗಿ 'ಥಿಯೋನ್'ನೊಂದಿಗಲ್ಲ, ಫ್ರಾನ್ಸದಲ್ಲಿ ಅವನ ಪರಿಚಯವಿದ್ದ ಬಾಲಕನೊಬ್ಬನಿದ್ದ, ಅವನು ನನ್ನ ಸಹೋದರನ ಮಿತ್ರನಾಗಿದ್ದ), ಸರಿ, ನನಗೆ ದರ್ಶನಗಳ ಶ್ರೇಣಿಯೇ ಇರುತ್ತಿತ್ತು. (ಭಾರತದ ಬಗ್ಗೆ ಏನನ್ನೂ ತಿಳಿದುಕೊಂಡಿದ್ದಿಲ್ಲ, ಬಹಳಷ್ಟು ಯುರೋಪಿಯನ್ನರು ಅದರ ಬಗ್ಗೆ ತಿಳಿದುಕೊಂಡಿರಲಿಲ್ಲ: "ಆ ದೇಶ ಜನರಿಂದ ತುಂಬಿಕೊಂಡಿದೆ" ಅವರಲ್ಲಿ ಸಂಪ್ರದಾಯಗಳಿವೆ, ಧರ್ಮಗಳಿವೆ, ಗೊಂದಲಮಯ ಮಸುಕಾದ ಇತಿಹಾಸವಿದೆ, ಅಲ್ಲಿ ಅಸಾಧಾರಣ ಸಂಗತಿಗಳು ಸಂಭವಿಸಿದ್ದವು ಎಂದು ಹೇಳಲಾಗುತ್ತಿತ್ತು. ನನಗೇನೂ ತಿಳಿದಿರಲಿಲ್ಲ). ಸರಿ, ಈ ಶ್ರೇಣಿಯ ಹಲವಾರು ದರ್ಶನಗಳಲ್ಲಿ ನಾನು ಶ್ರೀ ಅರವಿಂದರನ್ನು ನೋಡಿದೆ, ಭೌತಿಕವಾಗಿ ಅವರು ತೋರಿಬರುವ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದ್ದರು, ಆದರೆ ವೈಭವೀಕರಣ–

ಗೊಂಡಿರುತ್ತಿದ್ದರು, ಎಂದರೆ ಅದೇ ಮನುಷ್ಯನನ್ನು ನನ್ನ ಮೊದಲ ಭೇಟಿಯಲ್ಲಿ ನೋಡುವವಳಿದ್ದೆ, ಅವರು ಬಹುಮಟ್ಟಿಗೆ ತೆಳ್ಳಗಾಗಿದ್ದರು, ಅವರದು ಬಂಗಾರ ಮಿಶ್ರಿತ ಕಂಚಿನ ಬಣ್ಣವಾಗಿತ್ತು, ಮತ್ತು ಹೆಚ್ಚಾಗಿ ತೀಕ್ಷ್ಣವಾದ ಪಾರ್ಶ್ವ–ನೋಟವಿರುತ್ತಿತ್ತು, ಅಂಕೆಗೊಳಗಾಗದ ಗಡ್ಡ, ನೀಳವಾದ ಕೂದಲುಗಳಿದ್ದವು. ಧೋತರವೊಂದನ್ನು ಉಟ್ಟುಕೊಂಡಿದ್ದರು, ಅದರ ಒಂದು ತುದಿ ಹೆಗಲಿನ ಮೇಲೆ ಹರಡಿಕೊಂಡಿರುತ್ತಿತ್ತು. ತೋಳುಗಳು ಹಾಗೂ ಎದೆಯ ಮೇಲೆ ವಸ್ತ್ರ ಧರಿಸಿರಲಿಲ್ಲ, ಬರಿಗಾಲಿನಲ್ಲಿದ್ದರು. ಆ ಸಮಯದಲ್ಲಿ ನಾನು ಅವರದು 'ದರ್ಶನ ನೀಡುವಾಗಿನ ಉಡುಪು' ಎಂದು ಭಾವಿಸಿದ್ದೆ. ಭಾರತದ ಬಗ್ಗೆ ಏನೂ ತಿಳಿದಿರಲಿಲ್ಲ. ಭಾರತೀಯ ರೀತಿಯಲ್ಲಿ ಉಡುಪು ಧರಿಸಿದ ಭಾರತೀಯನನ್ನು ನಾನು ನೋಡಿರಲಿಲ್ಲ.

ಸರಿ, ನಾನವರನ್ನು ನೋಡಿದೆ. ಒಮ್ಮೆಗೆ, ಸಾಂಕೇತಿಕ ದರ್ಶನಗಳು, ಆಧ್ಯಾತ್ಮಿಕ ವಾಸ್ತವ ಸಂಗತಿಗಳು ಇವೆಲ್ಲವುಗಳ ಅನುಭವ ಪಡೆದೆ. ಅವು ಪರಿಪೂರ್ಣವಾಗಿ ನಿರ್ಧಾರಕ ಆಧ್ಯಾತ್ಮಿಕ ಅನುಭವಗಳಾಗಿದ್ದವು, ಭೇಟಿ ಮಾಡಿದುದರ ಮತ್ತು ಸಿದ್ಧಿಸಿಕೊಳ್ಳಬೇಕಾದ ದೈವೀ ಕಾರ್ಯದ ಬಗ್ಗೆ ಏಕತ್ರಗೊಂಡ ಗ್ರಹಿಕೆಯ ವಾಸ್ತವ ವಿಷಯಗಳಾಗಿದ್ದವು. ಮತ್ತು ಈ ದರ್ಶನಗಳಲ್ಲಿ ನಾನು ಭೌತಿಕವಾಗಿ ಕೈಕೊಂಡಿರದ ಏನೋ ಒಂದನ್ನು ಕೈಕೊಂಡೆ: ಹಿಂದೂ ಪದ್ಧತಿಯಲ್ಲಿ ಅವರೆದುರು ಸಾಷ್ಟಾಂಗ ನಮಸ್ಕಾರ ಮಾಡಿದೆ. ಇದೆಲ್ಲವನ್ನೂ ಚಿಕ್ಕ ಮಿದುಳಿನಲ್ಲಿ ತಿಳಿದುಕೊಳ್ಳದೇ ಮಾಡಿದೆ (ಇದರರ್ಥ ನಿಜವಾಗಿ ನಾನು ಏನು ಕೈಕೊಳ್ಳುತ್ತಿದ್ದೆ, ಹೇಗೆ ಕೈಕೊಳ್ಳುತ್ತಿದ್ದೆ ಎಂಬುದು ನನಗೆ ತಿಳಿದಿರಲಿಲ್ಲ – ಏನೇನನ್ನೂ ಇಲ್ಲ? ನಾನು ಕೈಕೊಂಡೆ ಮತ್ತು ಅದೇ ಸಮಯಕ್ಕೆ ನನ್ನ ಬಾಹ್ಯ ಸತ್ತೆ "ಇದೆಲ್ಲ ಏನು?" ಎಂದು ಕೇಳುತ್ತಿತ್ತು.

ಆ ದರ್ಶನ ಕುರಿತು ನಾನು ಬರೆದಿಟ್ಟೆ (ಬಹುಶಃ ನಂತರ ಕೈಕೊಂಡಿರ–ಬಹುದು), ಆದರೆ ಅದನ್ನು ಕುರಿತು ಯಾರ ಹತ್ತಿರವೂ ಮಾತನಾಡಲಿಲ್ಲ. (ಸ್ವಾಭಾವಿಕವಾಗಿ ಇಂತಹ ವಿಷಯಗಳನ್ನು ಕುರಿತು ಮನುಷ್ಯ ಮಾತನಾಡುವುದಿಲ್ಲ. ಆದರೆ ಅದು ಮುನ್ಸೂಚಕ, ಒಂದು ದಿನ ಆ ಏನೋ ಒಂದರ ಹಾಗೆ ಸಂಭವಿಸಲಿದೆ ಎಂಬ ಭಾವನೆ ನನಗೆ ಬಂದಿತು. ಮತ್ತು ಅದು ಪ್ರಜ್ಞೆಯ ಹಿನ್ನೆಲೆಯಲ್ಲಿ ಉಳಿದುಕೊಂಡಿತು, ಕ್ರಿಯಾಶೀಲವಾಗಿರಲಿಲ್ಲ, ಆದರೆ ಸತತ ಅದರ ಸಾನ್ನಿಧ್ಯವಿರುತ್ತಿತ್ತು.

ನಾನಿಲ್ಲಿಗೆ ಬಂದೆ... ಶ್ರೀ ಅರವಿಂದರನ್ನು ಮೊದಲ ಸಲ ಏಕಾಕಿಯಾಗಿ ಭೇಟಿಮಾಡಬೇಕೆಂದು ನನ್ನಲ್ಲಿದ್ದ ಏನೋ ಒಂದು ಬಯಸುತ್ತಿತ್ತು. ರಿಚರ್ಡ ಅವರನ್ನು ಕಾಣಲು ಪೂರ್ವಾಹ್ನದ ಸಮಯದಲ್ಲಿ ಹೋಗಿದ್ದ. ಮಧ್ಯಾಹ್ನ ನಾನು ಅವರನ್ನು ಭೇಟಿ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ಈಗ ಹಳೆಯ ಅತಿಥಿ ಗೃಹವಾಗಿರುವುದರ ಎರಡನೆಯ ವಿಶ್ರಾಂತಿ ಸ್ಥಾನ(dormitory)ದಲ್ಲಿ ಆಗ ಅವರು ವಾಸಿಸುತ್ತಿದ್ದರು. ನಾನು ಅಟ್ಟದ ಪಾವಟಣಿಗೆಗಳ ಮೇಲೇರಿ ಹೋದೆ ಮತ್ತು ಅವರು ಅಲ್ಲಿ ನನಗಾಗಿ ಕಾದುಕೊಂಡು, ಅಟ್ಟದ ಮೇಲ್ತುದಿಯ ಮೇಲೆ ನಿಂತಿದ್ದರು – ನಿಖರವಾಗಿ ಅದು ನಾನು ದರ್ಶನದಲ್ಲಿ ಕಂಡುಕೊಂಡ ಹಾಗಿತ್ತು. ಅದೇ ರೀತಿಯಲ್ಲಿ ವಸ್ತ್ರ ಧರಿಸಿದ್ದರು, ಪಾರ್ಶ್ವನೋಟ ಅದೇ ಆಗಿತ್ತು, ನಿಂತುಕೊಂಡ ಭಂಗಿ ಕೂಡ ಹಾಗೇ ಇತ್ತು. ಅವರು ನನ್ನತ್ತ ತಲೆ ತಿರುಗಿಸಿದರು. ನಾನು ಅವರ ಕಣ್ಣಲ್ಲಿ ಅವರೇ ಆಗಿದ್ದುದನ್ನು ನೋಡಿದೆ. ಎರಡು ವಿಷಯಗಳು ಸಣ್ಣನೆಯ ಶಬ್ದ(click) ಮಾಡಿದವು. (ತತ್ಕ್ಷಣ ಉಂಟಾದ ಆಘಾತದ ಸಂಜ್ಞೆ) ಆಂತರಿಕ ಅನುಭವ ಕೂಡಲೆ ಬಾಹ್ಯ ಅನುಭವದೊಂದಿಗೆ ಏಕವಾಯಿತು, ನಿರ್ಧಾರಕ ಆಘಾತದ ಬೆಸುಗೆ ಅಲ್ಲಿತ್ತು.

ಆದರೆ ಇದು ಕೇವಲ ನನ್ನ ದರ್ಶನದ ಪ್ರಾರಂಭವಾಗಿತ್ತು. ಅನುಭವಗಳ ಶ್ರೇಣಿಯೇ ಬಂದ ನಂತರ ... ಪಾಂಡಿಚೇರಿಯಲ್ಲಿ ಹತ್ತು ತಿಂಗಳುಗಳ ಸ್ವಲ್ಪಕಾಲದ ವಾಸ, ಐದು ವರ್ಷಗಳ ಕಾಲ ಪ್ರತ್ಯೇಕವಾಗಿರುವಿಕೆ, ನಂತರ ಪಾಂಡಿಚೇರಿಗೆ ಮರಳಿ ಬಂದದ್ದು, ಅದೇ ಮನೆಯಲ್ಲಿ ಅವರನ್ನು ಅದೇ ರೀತಿ ಭೇಟಿ ಮಾಡಿದ್ದು ... ದರ್ಶನದ ಕೊನೆ. ನಾನು ಅವರ ಬದಿಯಲ್ಲಿ ನಿಂತುಕೊಂಡಿದ್ದೆ. ನನ್ನ ಶಿರ ನಿಖರವಾಗಿ ಅವರ ಭುಜದ ಮೇಲಿರಲಿಲ್ಲ. ಆದರೆ ಅವರ ಭುಜ ಎಲ್ಲಿತ್ತು (ಅದನ್ನು ವಿವರಿಸುವುದು ನನಗೆ ತಿಳಿಯುತ್ತಿಲ್ಲ – ಭೌತಿಕವಾಗಿ ಯಾವ ಸ್ಪರ್ಶವೂ ಇರಲಿಲ್ಲ). ನಾವು ಹಾಗೆ ಒಬ್ಬರ ಬದಿಯಲ್ಲಿ ಇನ್ನೊಬ್ಬರಂತೆ ನಿಂತುಕೊಂಡಿದ್ದೆವು, ತೆರೆದಿಟ್ಟ ಕಿಟಕಿಯ ಮೂಲಕ ಹೊರಗೆ ನೆಟ್ಟನೋಟದಿಂದ ನೋಡುತ್ತಿದ್ದೆವು, ನಂತರ ಒಟ್ಟಿಗೆ, ನಿಖರವಾಗಿ ಅದೇ ಕ್ಷಣದಲ್ಲಿ "ಈಗ ಸಿದ್ಧಿಯನ್ನು ದೊರಕಿಸಲಾಗುವುದು" ಎಂಬ ಭಾವನೆ ತಂದುಕೊಂಡೆವು. ಮುದ್ರೆಯನ್ನಿರಿಸಲಾಗಿತ್ತು. ಮತ್ತು ಸಿದ್ಧಿಯನ್ನು ದೊರಕಿಸಲಾಗುವುದು ಎಂದು ನನ್ನ ದರ್ಶನದಲ್ಲಾಗಿದ್ದ ಅದೇ ನಿಶ್ಚಿತತೆಯಿಂದ ದೈವೀ ವಿಷಯ ಘನವಾಗಿ ನನ್ನೊಳಗೆ ಅವರೋಹಣ ಮಾಡುತ್ತಿರುವ ಭಾವನೆ

ಬಂದಿತು. ಆ ಕ್ಷಣದ ನಂತರ ಹೇಳುವುದೇನೂ ಇರಲಿಲ್ಲ, – ಶಬ್ದಗಳಿರಲಿಲ್ಲ. ನಾವು ಅದೆಂದು ತಿಳಿದುಕೊಂಡೆವು.

ಆದರೆ ಇವೆರಡೂ ಭೇಟಿಗಳ ನಡುವೆ ಅವರು ಅನುಭವಗಳ ಒಂದು ಇಡೀ ಶ್ರೇಣಿಯಲ್ಲಿ ಭಾಗವಹಿಸಿದ್ದರು, ಅವು ಕ್ರಮೇಣ ಎಚ್ಚತ್ತುಕೊಳ್ಳುವಂತೆ ಮಾಡುವ ಅನುಭವಗಳು. 'ಪ್ರಾರ್ಥನೆಗಳು ಹಾಗೂ ಧ್ಯಾನಗಳು' ಶೀರ್ಷಿಕೆ ಇರುವ ಪುಸ್ತಕದಲ್ಲಿ ಇದರ ಭಾಗಶಃ ಟಿಪ್ಪಣಿ ಇದೆ. (ಅದರಲ್ಲಿ ವೈಯಕ್ತಿಕ ಎನಿಸುವ ಅಂಶಗಳನ್ನು ತೆಗೆದು ಹಾಕಿದ್ದೇನೆ.) ಆದರೆ ಅಲ್ಲಿ ವರ್ಣಿಸಿ ಹೇಳಲಾಗಿರಲಿಲ್ಲ, ಕೇವಲ ಉಪಸಂಹಾರವನ್ನು ಕೊಡಲಾಗಿತ್ತು – ಆ ಅನುಭವದಲ್ಲಿ ಹೇಳಿದ್ದು ಹೀಗಿದೆ: "ವಿಶ್ವದ ಕಾರ್ಯದಲ್ಲಿ ಭಾಗವಹಿಸುವುದನ್ನು ನಾನು ಅವನಿಗೆ ಕೊಟ್ಟಾಗ ಮನುಷ್ಯ ತಿರಸ್ಕರಿಸಿದ್ದ, ಅವನಿಗೆ ಹೊಸ ಸೃಷ್ಟಿ ಬೇಕಾಗಿರಲಿಲ್ಲ, ಅದನ್ನು ತಿರಸ್ಕರಿಸಿದ, ಹಾಗಾಗಿ ಈಗ ಅದನ್ನು ಭಗವಂತನಿಗೆ ಅರ್ಪಿಸುತ್ತಿದ್ದೇನೆ."

**ಅನುಯಾಯಿಯೊಂದಿಗೆ ಮಾತುಕತೆ: ಡಿ 20, 1961 – ಶ್ರೀಮಾತೆ**

*

**ಪರಿವರ್ತನೆ ಹಾಗೂ ದೈವೀ ಶಕ್ತಿ**

ನಿಮ್ಮ ಮಾನಸಿಕ ಹಾಗೂ ಪ್ರಾಣಿಕ ಸತ್ತೆಗಳಲ್ಲಿದ್ದುದನ್ನು ಭೌತಿಕದಲ್ಲಿ, ಭೌತಿಕ ದೇಹದ ಜೀವಕೋಶಗಳಲ್ಲಿಯೂ ಕೂಡ ಕೆಳಗಿಳಿಸಿ ತರಲು ಮನುಷ್ಯ ಶಕ್ತನಾದರೆ ಪರಿವರ್ತನೆ ಸಂಪೂರ್ಣವಾಗುವುದು. ಅದಕ್ಕಾಗಿರುವ ಷರತ್ತುಗಳೆಂದರೆ ಅದೇ ಆಳವಾದ ಶಾಂತಿ, ವಿಸ್ತಾರ, ಬಲ, ಸಾಮರ್ಥ್ಯ ಹಾಗೂ ನಮ್ರತೆ ಇವುಗಳನ್ನು ಮನಸ್ಸಿನಿಂದ ಹಿಡಿದು ಕೆಳಗಡೆಗಿರುವ ಜೀವಕೋಶಗಳ ವರೆಗೆ ಕಾಪಾಡಿಕೊಂಡು ಬರಬೇಕು. ಆ ಆಧಾರ ತಯಾರಾದಾಗ ಮೇಲ್ಗಡೆಯಿಂದ ಕಾರ್ಯಗತಿ ಪ್ರಾರಂಭವಾಗುತ್ತದೆ. ಪರಿವರ್ತನೆಗೆ ದೈವೀ ಶಕ್ತಿಯ ಆವಶ್ಯಕತೆ ಇರುವುದಿಲ್ಲ. ದೇಹದಲ್ಲಿ ಭಗವಂತ ಅವತರಿಸುವಂತೆ ಮಾಡಲು ಅತಿಮಾನಸದಲ್ಲಿರುವ ನಿಮ್ಮದೇ ದೈವೀ ದೇಹ ಅವತಾರ ತಾಳುವಂತೆ ಮಾಡಬೇಕು. ಪರಿವರ್ತನೆ ವೈಯಕ್ತಿಕ ಸಂಗತಿ. ದೈವೀ ಶಕ್ತಿ ಅದರೊಡನೆ ಏನು ಮಾಡುವುದಿದೆ ಎಂಬುದು ನನಗೆ ತೋರಿಬರುತ್ತಿಲ್ಲ.

"ದೈವೀ ಶಕ್ತಿಯ ಕಾರ್ಯವಿಧಾನ ವಿಶೇಷ ರೀತಿಯದಾದ ಏನೋ ಒಂದಾಗಿದೆ. ನನ್ನದೇ ಸಂದರ್ಭದಲ್ಲಿ ಅದು ನಾನು ಕೈಕೊಳ್ಳಬೇಕಾಗಿದ್ದ ಕಾರ್ಯಕ್ಕಾಗಿ ಅವಶ್ಯವಾದ ಷರತ್ತಾಗಿತ್ತು. ನನ್ನದೇ ಪರಿವರ್ತನೆಯನ್ನು ನಾನು ಕೈಕೊಳ್ಳಬೇಕಾಗಿದ್ದರೆ ಇಲ್ಲವೆ ನನ್ನ ಸಂಕಲ್ಪದಲ್ಲಿ ಬಂದಿದ್ದ ಆಯ್ದ ಕೆಲವರಿಗೆ ಹೊಸ ಯೋಗವನ್ನಾಗಲಿ ಇಲ್ಲ ಹೊಸ ಆದರ್ಶವನ್ನಾಗಲಿ ಕೊಡುವುದಿದ್ದರೆ ಅದನ್ನು ಬೇರೆ ಯಾವ ಶಕ್ತಿಯ ಆವಶ್ಯಕತೆ ಇಲ್ಲದೆ ಕೈಕೊಳ್ಳುತ್ತಿದ್ದೆ. ಆದರೆ ನಾನು ಕೈಕೊಳ್ಳಲೇ–ಬೇಕಾಗಿದ್ದ ಕಾರ್ಯಕ್ಕೆ ಎರಡೂ ಬದಿಗಳು ಒಟ್ಟಿಗೆ ಬರಬೇಕಾದ ಆವಶ್ಯಕತೆಯಿತ್ತು. ಮಿರ್‍ರಾ ಅವರೊಂದಿಗೆ ಒಟ್ಟಿಗೆ ಕೈಕೊಂಡ ಕಾರ್ಯ ಕೆಲವೊಂದು ಪರಿಸ್ಥಿತಿಗಳನ್ನು ಸೃಷ್ಟಿಸಿತು. ಅದು ಪರಿವರ್ತನೆ ಕಾರ್ಯ ಸುಲಭವಾಗುವಂತೆ ಮಾಡಿತು. ನೀವು ಪರಿಸ್ಥಿತಿಗಳ ಪ್ರಯೋಜನ ಪಡೆಯಬಲ್ಲಿರಿ. ನನ್ನ ಸಂದರ್ಭದಲ್ಲಿ ದೈವೀ ಶಕ್ತಿ ಅವಶ್ಯವಾಗಿತ್ತು ಎಂಬ ಕಾರಣದಿಂದ ಪ್ರತಿಯೊಬ್ಬನಿಗೂ ಒಂದು ದೈವೀ ಶಕ್ತಿಯ ಆವಶ್ಯಕತೆ ಇರುವುದಿಲ್ಲ. ಒಂದು ಸಂದರ್ಭದಿಂದ ನೀವು ಅದನ್ನು ಸಾರ್ವತ್ರೀಕರಣಗೊಳಿಸಲಾರಿರಿ. ಅದು ದೊಡ್ಡದು ಅಥವಾ ಚಿಕ್ಕದು ಎಂಬುದರ ಪ್ರಶ್ನೆ ಅಲ್ಲ. ನೀವು ನನಗಿಂತ ಕಡಿಮೆ ಸಂಕೀರ್ಣರಾಗಿರಬೇಕೆಂಬುದರ ಪ್ರಶ್ನೆ ಅದಾಗಿದೆ. ನಾನು ಕೈಕೊಂಡದ್ದನ್ನು ನೀವು ಕೈಕೊಳ್ಳುವುದಿದ್ದರೆ ಅದು ನಿಮಗೆ ಎಂದಿಗೂ ಸಾಧ್ಯವಾಗುವುದಿಲ್ಲ. ನಿಮಗೆ ದೈವೀ ಶಕ್ತಿಯೊಂದು ಬೇಕಾಗಿದ್ದರೆ ಮೊದಲಿಗೆ ನೀವು ಆ ಅರ್ಹತೆ ಪಡೆದಿರಬೇಕು. ಮೊದಲ ಷರತ್ತೆಂದರೆ ಕರ್ಮ, ಲೈಂಗಿಕತೆ ಇಂತಹ ಚಲನೆಗಳ ಮೇಲೆ ನೀವು ಪ್ರಭುತ್ವ ಸಾಧಿಸಿರಬೇಕು. ಬೇರೆ ಅನೇಕ ವಿಷಯಗಳಿವೆ. ಒಂದು ವಿಷಯವೆಂದರೆ ಆಂತರಿಕ ಪ್ರಜ್ಞೆಯ ಪ್ರತಿಯೊಂದು ಸ್ತರದ ಮೇಲೆ ಸಂಪೂರ್ಣ ಏಕತೆ ಇರುವುದಾಗಿದೆ."

**Mother India, April 1970, pp 147–48** **– ಶ್ರೀ ಅರವಿಂದರು**

*

ಶ್ರೀಮಾತೆಯವರು ಶ್ರೀ ಅರವಿಂದರ ಬಗ್ಗೆ ಯಾವ ಭಾವನೆ ಹೊಂದಿದ್ದರೆಂಬುದನ್ನು ಅವರು ಶ್ರೀ ಅರವಿಂದರ ಹೆಸರೆತ್ತಿ ಮಾತನಾಡಿದಾಗ ನೋಡಬಹುದಾಗಿತ್ತು. ಯಾವುದೋ ಅಮೃತದ ವರ್ಣನಾತೀತ ಸ್ವಾದ ಅವರ ತುಟಿಗಳ ಮೇಲೆ ಇದ್ದ ಹಾಗಿರುತ್ತಿತ್ತು. ದೂರದಲ್ಲಿರುವ ಅವರ ಸಾನ್ನಿಧ್ಯ ಕುರಿತು

ಪ್ರಾರ್ಥನೆ ಕೈಕೊಂಡುದುದರ ಮತ್ತು ಅದನ್ನೇ ಕುರಿತು ತಮ್ಮದೇ ಗಾಢತೆಗಳಿಂದ ಆವಾಹನೆಯ ಸಂಗೀತದೊಂದಿಗೆ ಶ್ರೀ ಅರವಿಂದರ ಹೆಸರನ್ನು ಉಚ್ಚರಿಸಿದಾಗ ಅದು ಮಂತ್ರಗಳಲ್ಲಿರುವ ದೈವೀ ಮಂತ್ರದ ಹಾಗಿರುತ್ತಿತ್ತು. ಆ ಮಂತ್ರವನ್ನು ಅವರು ಅರ್ಧ ಫ್ರೆಂಚ್ ಹಾಗೂ ಅರ್ಧ ಇಂಗ್ಲಿಷ ಉಚ್ಚಾರದೊಂದಿಗೆ ಹೇಳುತ್ತಿದ್ದರು. Sri ಯೋಳಗಿನ S, ತಪ್ಪದೆ Sh ಆಗುತ್ತಿತ್ತು. ಅದರೊಳಗಿನ r ಮತ್ತು Aurobindo ದೊಳಗಿನ r ಗಂಟಲಿನಿಂದ ಚಿನ್ನದ ಗುಳುಗುಳಿನ ಹಾಗೆ ಹೊರಬರುತ್ತಿತ್ತು. ಆ ನಾದದಲ್ಲಿ ಅಸಾಧಾರಣ ಭಕ್ತಿ ಮತ್ತು ಅತ್ಯಂತ ಏಕತೆ ಏಕಕಾಲಕ್ಕೆ ಇದ್ದ ಹಾಗೆ ತೋರಿಬರುತ್ತಿದ್ದವು.

ಆಶ್ರಮದ ಆಡಳಿತವನ್ನು ಶ್ರೀ ಅರವಿಂದರು ಶ್ರೀಮಾತೆಯವರ ಕೈಗಳಿಗೆ ಒಪ್ಪಿಸಿದ್ದರು. ಅವರು ಅದನ್ನು ಸಂಯೋಜಿಸಿದರು, ವಿಸ್ತರಿಸಿದರು, ಹಲವಾರು ಮುಖಗಳಿದ್ದ ಸೃಷ್ಟ್ಯಾತ್ಮಕತೆಯನ್ನು ತಂದರು, ಅದು ಎಲ್ಲೆಡೆಯಲ್ಲಿ ಶ್ರೇಷ್ಠ ಹೆಸರು ಶ್ರೇಷ್ಠ ರೂಪವನ್ನು ಪಡೆಯುತ್ತಿರುವ ಹಾಗಿತ್ತು. ನವ್ಹೆಂಬರ 24, 1926ರ ಸಾಯಂಕಾಲದಿಂದ ಶ್ರೀ ಅರವಿಂದರು ಹಿನ್ನೆಲೆಯಲ್ಲಿ ಉಳಿದುಕೊಳ್ಳಲು ಪ್ರಾರಂಭಿಸಿದರು, ಅವರು ಕ್ರಿಯಾಶೀಲ ಧ್ಯಾನದಲ್ಲಿ ತೊಡಗಿಕೊಂಡರು. ಇಲ್ಲಿಯವರೆಗೆ ಪ್ರಕಟವಾಗಿರದ ಅತಿಮನಸ್ಸು ಅವರೋಹಣ ಮಾಡಿಬರಬೇಕಾಗಿತ್ತು. ಅದರ ಅವರೋಹಣ ಕುರುಡಾಗಿರುವಂತೆ ತೋರಿಬರುವ, ದೀರ್ಘಕಾಲದಿಂದ ವೇದನೆಗೊಳಗಾದ ಜಗತ್ತಿನ ಭೌತ ದ್ರವ್ಯದಲ್ಲಿ ಆಗಬೇಕಾಗಿತ್ತು. ಶ್ರೀಮಾತೆಯವರು ಎಲ್ಲ ಆಶಯ ಹಾಗೂ ಉದ್ದೇಶಗಳಿಗಾಗಿ ಹೆಚ್ಚು ಕಡಿಮೆ ನಮ್ಮ ಏಕೈಕ ಗುರುವಾಗಿದ್ದರು. ಅದು ಯಾವಾಗಲೂ ನಿಜವಾದ ಅವರ ಹೇಳಿಕೆಯಿಂದ ಪ್ರತಿಷ್ಠಾಪನೆಗೊಂಡಿತ್ತು. ಇದನ್ನು ಬಹುಶಃ 1930ರ ಸುಮಾರು ಸಾಧಕನೊಬ್ಬ ಬರೆದ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು, ಆ ಪತ್ರವನ್ನು ಶ್ರೀ ಅರವಿಂದರು ಆ ಸಾಧಕನಿಂದ ಬರೆಸಿದ್ದರು, ಬರೆದದ್ದರಲ್ಲಿ ತಿದ್ದುಪಡೆ ಮಾಡಿದ್ದರು.

"ನೀನು ಆಶ್ರಮ ಕುರಿತು ಮೂಲಭೂತ ತಪ್ಪು ಕಲ್ಪನೆಯಡಿಯಲ್ಲಿ ಕಷ್ಟಪಡುತ್ತಿರುವಿ. ಅದು ಶ್ರೀ ಅರವಿಂದರು ಯೋಜನೆ ಮಾಡಿ ನಿರ್ಮಿಸಿದ ಸಂಸ್ಥೆಯಲ್ಲ, ಅದರ ನಿರ್ವಹಣೆಗಾಗಿ ಕೆಲವೊಂದು ನಿಯಮಗಳು, ಆಜ್ಞೆಗೊಳಪಡಿಸಿ ಸ್ಥಿರಗೊಳಿಸಿದ ಶಾಸನಗಳಾಗಲಿ, ಕಟ್ಟಳೆಗಳಾಗಲಿ ಇಲ್ಲ. ಶ್ರೀ ಅರವಿಂದರು ಪ್ರಕಟಿಸುವ

ದೈವೀ ಸತ್ಯದ ಶಕ್ತಿಯಿಂದ ಅದು ತನ್ನಷ್ಟಕ್ಕೆ ತಾನೇ ಬೆಳೆದು ಬಂದಿದೆ, ಮತ್ತು ಕೇವಲ ಆ ಸತ್ಯದ ಚಲನೆಗಳನ್ನು ಅನುಸರಿಸಬಲ್ಲದು. ಶ್ರೀ ಅರವಿಂದರು ಹಾಗೂ ಆಶ್ರಮ ಸಮಗ್ರವಾಗಿ ಇಡಿಯಾಗಿದ್ದಾರೆ. ಅವರ ಸತ್ತೆ ಆಶ್ರಮದಲ್ಲಿ ಹರಡಿಕೊಂಡಿದೆ ಹಾಗೂ ಆಶ್ರಮದ ಇಡೀ ಜೀವನವನ್ನು ಒಂದು ಏಕೈಕ ಸಾಮರಸ್ಯವಿರುವ ಆಧ್ಯಾತ್ಮಿಕತೆಯಲ್ಲಿ ಒಟ್ಟುಗೂಡಿಸುತ್ತದೆ, ಕೈಗೆತ್ತಿಕೊಳ್ಳುತ್ತದೆ. ಅದರ ಜೀವನ ದಿವ್ಯಾತ್ಮನ ಜೀವನ, ಅದರ ಬೆಳವಣಿಗೆ ದಿವ್ಯಾತ್ಮನ ಬೆಳವಣಿಗೆ. ಆಶ್ರಮವನ್ನು ಸಾಧಕರ ಒಂದು ಗುಂಪು ಇಲ್ಲವೆ ಸಮೂಹವೆಂದು ನೋಡುವುದು ಇಲ್ಲವೆ ಶ್ರೀ ಅರವಿಂದರನ್ನು ಹೊರತುಪಡಿಸಿ ಇರುವ ಜೀವನ, ಇಲ್ಲವೆ ಅಭೀಪ್ಸೆ ಇಲ್ಲವೆ ಗುರಿಯನ್ನು ಹೊಂದಿದೆ ಎಂದು ಭಾವಿಸುವುದು ಇಡಿಯಾಗಿ ತಪ್ಪಾಗಿ–ರುತ್ತದೆ. ಅದರ ಜೀವನ ಹಾಗೂ ಚಲನೆಗಳು, ಚಟುವಟಿಕೆಗಳು ಅಂತರಂಗದಿಂದ ಬಂದ ಬೆಳವಣಿಗೆ, ಅಭಿವೃದ್ಧಿ ಇವುಗಳ ಸಮಗ್ರ ಅಭಿವ್ಯಕ್ತಿಯಾಗಿರುತ್ತವೆ. ಅದಕ್ಕೆ ಶಾಸನಗಳಿಲ್ಲ, ನಿಯಮಗಳಿಲ್ಲ ಇಲ್ಲವೆ ಕಟ್ಟಳೆಗಳಿಲ್ಲ, ಕೇವಲ ಆಧ್ಯಾತ್ಮಿಕ ಬೆಳವಣಿಗೆಯ ಒಂದು ನಿಯಮ ಶ್ರೀ ಅರವಿಂದರಲ್ಲಿ ಹಾಗೂ ಅವರ ಮೂಲಕ ಇದೆ."

**Our Light and Delight, pp. 8–9** **– ಅಮಲ ಕಿರಣ**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 4/3/2017ರಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ "ಜ್ಯೋತಿ ಪ್ರಸರಣ" ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಡಾ. ಎಂ.ಆರ್. ಕಲ್‌ಗಲ್ ಹಾಗೂ ಶ್ರೀಮತಿ ಚಂದ್ರಿಕಾ ಕಲ್‌ಗಲ್ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಶಾಲಾ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್‌ರವರು ಉಪಸ್ಥಿತರಿದ್ದರು. ಜ್ಞಾನದ ಸಂಕೇತವಾದ ಜ್ಯೋತಿಯನ್ನು ಶಿಕ್ಷಕ ವೃಂದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ನೀಡಿದರು. ನಂತರ ಹತ್ತನೆ ತರಗತಿಯ ವಿದ್ಯಾರ್ಥಿಗಳು ಒಂಭತ್ತನೆಯ ತರಗತಿಯ

ವಿದ್ಯಾರ್ಥಿಗಳಿಗೆ ಜ್ಯೋತಿಯನ್ನು ಹಸ್ತಾಂತರಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಬಳಿಕ ಹತ್ತನೆಯ ತರಗತಿಯ ವಿದ್ಯಾರ್ಥಿಗಳು ಶಾಲೆಯಲ್ಲಿ ತಾವು ಅನುಭವಿಸಿದ ಹದಿಮೂರು ವರ್ಷಗಳ ತಮ್ಮ ಸಂತೋಷದ ಕ್ಷಣಗಳು ಮತ್ತು ಅದರ ಸವಿನೆನಪುಗಳನ್ನು ಎಲ್ಲರೊಂದಿಗೆ ಹಂಚಿಕೊಂಡರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.



*His is a search of darkness for the light,*
*Of mortal life for immortality.*

- Sri Aurobindo

**RNI No. 22511/1971**
No. of Pages **52 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.